ಪಂಚಾಂಗ ಎಷ್ಟು ನಿಜ?

ಜಿ.ಟಿ. ನಾರಾಯಣ ರಾವ್



ಲೋಕಶಿಕ್ಷಣ ನಿರ್ದೇಶನಾಲಯ

58

ನವಸಾಕ್ಷರರ ಪುಸ್ತಕ ಮಾಲೆ

ಪಂಚಾಂಗ ಎಷ್ಟು ನಿಜ ?



ರಾಜ್ಯ ಸಂಪನ್ಮೂಲ ಕೇಂದ್ರ

(ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ)

ಕುವೆಂಪು ನಗರ, ಮೈಸೂರು

ಪಂಚಾಂಗ ಎಷ್ಟು ನಿಜ?

ಜಿ.ಟಿ. ನಾರಾಯಣ ರಾವ್

ವಿ–ಪುಸ್ತಕಕ್ಕೊಂದು ಮುನ್ನುಡಿ

ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ಇದರ ರಾಜ್ಯ ಸಂಪನ್ಮೂಲ ಕೇಂದ್ರ ೧೯೮೫ರಲ್ಲಿ ಪ್ರಕಟಿಸಿದ ಪುಸ್ತಕ – ಪಂಚಾಂಗ ಎಷ್ಟು ನಿಜ? ಲೇಖಕ ಜಿ.ಟಿ. ನಾರಾಯಣರಾವ್. ಇದು ಲೋಕ ಶಿಕ್ಷಣ ನಿರ್ದೇಶನಾಲಯದ ನವಸಾಕ್ಷರರ ಪುಸ್ತಕ ಮಾಲೆಯಲ್ಲಿ ೫೮ನೇ ಶೀರ್ಷಿಕೆ. ಸಂಪಾದಕ ರಾಜಾ ಹೊಸಮಾಳ, ಮುನ್ನುಡಿಕಾರ ಇಲಾಖೆಯ ನಿರ್ದೇಶಕ ಪಿ. ಸುಬ್ಬರಾವ್. ಅಂದಿನ ಬಹುವರ್ಣದ ಮುಖಪುಟ ವಿನ್ಯಾಸ – ಕೆ. ಲೋಕೇಶ್ ಹಾಗೂ ಒಳಗಿನ ರೇಖಾಚಿತ್ರಕಾರ ಎಸ್. ವೇದಮೂರ್ತಿ. ಲ್ಯಾಮಿನೇಶನ್ ಸಹಿತದ ಮುಖಪುಟ, ತೀರಾ ಸಾಮಾನ್ಯ ಬಿಳಿ ಕಾಗದದ ಈ ೪೪ + ೪ ಪುಟಗಳ ಬೆಲೆ ಇಲಾಖೆಯ ವಿಚಿತ ನಿಯಮಗಳಿಗನುಗುಣವಾಗಿ ಆರು ರೂಪಾಯಿ ತೊಂಬತ್ನಾಲ್ಕು ಪೈಸೆಗಳು ಮಾತ್ರ. (ದಯವಿಟ್ಟು ಖಚಿತ ಚಿಲ್ಲರೆ ಕೊಟ್ಟು ಸಹಕರಿಸಿ ಎಂದು ಮುದ್ರಿಸಿಲ್ಲ!) ಈ ಮೊದಲ ಮುದ್ರಣದ ೩೨೦೦ ಪ್ರತಿಗಳನ್ನು ಬೆಂಗಳೂರಿನ ಗೀತಾಂಜಲಿ ಪ್ರಿಂಟರ್ಸ್ ಅಚ್ಚುಹಾಕಿದ್ದಾರೆ. ಇದು ಅಥವಾ ಮಾಲೆಯ ಇತರ ಪುಸ್ತಕಗಳು ಮುಂದುವರಿದ ಕುರಿತು ನನಗೆ ಸಂಶಯವಿದೆ; ಕಾರಣ – ವಯಸ್ಕರ ಶಿಕ್ಷಣ ಸಮಿತಿ ಬಹಳ ಹಿಂದೆಯೇ ಬರ್ಖಾಸ್ತಾಗಿದೆ.

ನವಸಾಕ್ಷರರ ಲೋಕಾನುಭವ ದೊಡ್ಡದು, ಶಿಷ್ಟ ಭಾಷಾಜ್ಞಾನ ಮಿತಿಯದ್ದು ಎಂಬ ಅರಿವಿನೊಡನೆಯೇ ರೂಪುಗೊಂಡ ಈ ಪುಸ್ತಕ ವೈಚಾರಿಕವಾಗಿ ಇಂದಿಗೂ ಪ್ರಸ್ತುತ ಎಂಬ ನೆಲೆಯಲ್ಲಿ ನಾನು ಒಳಗಿನ ಪುಟಗಳನ್ನು ಯಥಾವತ್ತು ಸ್ಕ್ಯಾನ್ ಮಾಡಿದ್ದೇನೆ. ಎಂದಿನಂತೆ ಮಗ ಅಭಯಸಿಂಹ ವಿ–ಪುಸ್ತಕ ರೂಪಿಸಿದ್ದಾನೆ. ಓದುವ, ಉಚಿತವಾಗಿ ಪ್ರಸರಿಸುವ ಸಂತೋಷ ನಿಮ್ಮದು. ಇದೇ ವಿಚಾರ ಮಾರ್ಗದಲ್ಲಿ ಜಿಟಿನಾ ಹೆಚ್ಚಿನ ಓದಿಗಾಗಿ: ವೈಜ್ಞಾನಿಕ ಮನೋಧರ್ಮ (ನವಕರ್ನಾಟಕ ಪ್ರಕಾಶನ), ಜಾತಕ ಮತ್ತು ಭವಿಷ್ಯ (ರೂ ಹತ್ತು. ನನ್ನಲ್ಲಿ ಲಭ್ಯ), ಭವಿಷ್ಯ ವಿಜ್ಞಾನ (ಇಲ್ಲೇ ವಿ–ಪುಸ್ತಕವಾಗಿ ಲಭ್ಯ), ಭವಿಷ್ಯ ವಾಚನ (ಮರುಮುದ್ರಣ ಬರಲಿದೆ).

– ಜಿ.ಎನ್.ಅಶೋಕವರ್ಧನ

ಅತ್ರಿ ವಿ–ಪುಸ್ತಕಗಳು
ಅಭಯಾದ್ರಿ, ಪಿಂಟೋರವರ ಓಣಿ
ಕರಂಗಲ್ಪಾಡಿ, ಮಂಗಳೂರು ೫೭೫೦೦೩ ಕರ್ನಾಟಕ
ದೂರವಾಣಿ: ೦೮೨೪–೨೪೯೨೩೯೭
athreebook@gmail.com
www.athreebook.com

ಪಂಚಾಂಗ ಎಷ್ಟು ನಿಜ ?

ಜಾತಕ ಬರೆಸಿದರೆ ಲಾಭ ಯಾರಿಗೆ ?

ರಾಮಣ್ಣ, ಸೀತಕ್ಕ ದಂಪತಿಗಳ ಚೊಚ್ಚಲ ಕೂಸೇ ಗಂಡು. ಮುತ್ತಿನ ಚಂಡು! ಸಹಜವಾಗಿ ಇವರಿಗೆ ಇಮ್ಮಡಿ ಸಂತಸ : ಮಗ ಹುಟ್ಟಿದ್ದು ಒಂದು, ಅದು ಗಂಡಾದದ್ದು ಇನ್ನೊಂದು. ಅಂತೆಯೇ ಮಗುವಿನ ಭವಿಷ್ಯ ಕುರಿತಂತೆ ಇವರಿಗೆ ಭಯ ಮತ್ತು ಕಾತರತೆ, ಜೊತೆಯಲ್ಲೇ ನಿರೀಕ್ಷೆ ಮತ್ತು ಆಶಯ ತೀವ್ರವಾಗಿದ್ದುವು. ಇಂಥ ಸಂಭ್ರಮ ಸನ್ನಿವೇಶಗಳಲ್ಲಿ ಎಲ್ಲ ತಂದೆಯರೂ ಮಾಡುವಂತೆ ರಾಮಣ್ಣನೂ ಹಳ್ಳಿಯ ಜೋಯಿಸನತ್ತ ಹೋದ: ಮಗುವಿನ ಜಾತಕ ಬರೆಸಬೇಕು, ಕಣಿ ಕೇಳಬೇಕು, ಗಂಡಾಂತರ ನಿವಾರಿಸಲು ಹರಕೆ ಹೋಮ ತಾಯಿತಿ ಬಲಿ ಮುಂತಾದವನ್ನು ಕೈಗೊಳ್ಳಬೇಕು............



"ಮಗುವಿನ ಜನನ ದಿನಾಂಕ 13-1-1995 ಶುಕ್ರವಾರ ನೇಸರು ಮೂಡಿ ಸುಮಾರು 2 ತಾಸು ಕಳೆದಾಗ" ಎಂಬ ಸ್ಥೂಲ ಮಾಹಿತಿಯನ್ನು ರಾಮಣ್ಣ ಆ ಜೋಯಿಸನಿಗೆ ನೀಡಿದ.

ಜೋಯಿಸ ಸಂದೂಕದಿಂದ ಪಂಚಾಂಗ ಹೊರತೆಗೆದ. ರಾಮಣ್ಣ ನೆಟ್ಟ ದೃಷ್ಟಿಯಿಂದ ಅದನ್ನೇ ದಿಟ್ಟಿಸತೊಡಗಿದ. ತನ್ನ ಬಾಳಕುಡಿಯ ನಾಳೆಗಳ ಚರಿತ್ರೆಯೇ ಅದರಲ್ಲಿ ಅಡಗಿದೆ; ಅದನ್ನು ಓದಿ ತನಗೆ ವಿವರಿಸುತ್ತಿರುವ ಈ ಜೋಯಿಸ ನಿಜಕ್ಕೂ ದೇವರ ದೂತ. "ಪರಮಾತ್ಮ! ನಮ್ಮ ಕಂದನ ಭವಿಷ್ಯ ಚೆನ್ನಾಗಿರಲಿ, ಹಣೆಬರಹ ನೆಟ್ಟಗಿರಲಿ. ಯಾವ ಮಾರಿನೋಟವೂ ಬಡಿಯದಿರಲಿ." ರಾಮಣ್ಣನ ಯೋಚನೆ ಈ ಧಾಟಿಯಲ್ಲಿ ಹರಿಯುತ್ತಿದ್ದಾಗ ಜೋಯಿಸನ ಪ್ರವಾದಿವಾಣಿ ಹೊರಹೊಮ್ಮಿತು :

"ಭಾವ ನಾಮ ಸಂವತ್ಸರದ ಪೌಷಶುಕ್ಲ ಹೇಮಂತಋತು ಉತ್ತರಾಯಣ ದ್ವಾದಶಿ ರೋಹಿಣಿ ನಕ್ಷತ್ರದಲ್ಲಿ ಶುಭ ಜನನ."

ಕವಡೆ ಲೆಕ್ಕವನ್ನು ಹಾಕಿ, ಅಡ್ಡ ನೀಟಗೆರೆಗಳೆಳೆದು, ಮಂತ್ರ ಹೇಳಿ ತಂತ್ರ ಬೆಸೆದು, ನುಡಿದ ಜೋಯಿಸ: "ಆರೋಗ್ಯ ಮತ್ತು ಆಯುಷ್ಯ ಕಲ್ಲುಗುಂಡಿನ ಹಾಗೆ ಭದ್ರವಾಗಿವೆ. ಜನನತಾರೆ ರೋಹಿಣಿಯಾದ್ದರಿಂದ ವೃಷಭರಾಶಿ. ಮೊದಲ ಹತ್ತು ವರ್ಷ ಚಂದ್ರದಶೆ. ಚಂದ್ರನಿಗೆ ಮಿಥುನ ಉಚ್ಚರಾಶಿ. ಎಂದೇ ಈ ಮಗುವಿನ ಭವಿಷ್ಯ ಉಜ್ವಲವಾಗಿದೆ. ಆದರೆ ಪಂಚಮ ಮಂಗಳ ಮತ್ತು ಏಕಾದಶ ಶನಿ ಎರಡೂ ದುಷ್ಟ ಗ್ರಹಗಳು. ಹೀಗಾಗಿ ಮಗುವಿಗೆ ಮೊದಲ ಐದಾರು ವರ್ಷ ಶೀತಜ್ವರ ಬಾಧೆ ಸಾಕಷ್ಟು ಪೀಡೆ ಕೊಡುತ್ತದೆ. ಚಂದ್ರ-ಕುಜ ಸಂಧಿಕಾಲದಲ್ಲಿ, ಅಂದರೆ ಇನ್ನು ಹತ್ತು ವರ್ಷಗಳ ಅನಂತರ, ವಿಶೇಷ ಜಾಗರೂಕರಾಗಿರಬೇಕು. ಶಾಂತಿ, ಹರಕೆ, ತಾಯಿತಿ ಮುಂತಾದ ಪುಣ್ಯ ಕಾರ್ಯಗಳಿಂದ ದೇವತೆಗಳನ್ನು ಒಲಿಸಿ ಅನುಗ್ರಹ ಪಡೆಯುವುದು ಶ್ರೇಯಸ್ಕರ."

ಈ ರಾಮಣ್ಣ ನಾವು ಆಗಬಹುದು!

ಇಲ್ಲಿಯ ರಾಮಣ್ಣ, ನಾವು ಯಾರೂ ಆಗಬಹುದು. ಏಕೆಂದರೆ ಈ ಅನುಭವ ನಮಗೆ ಹೊಸತಲ್ಲ. ಜೋಯಿಸನ ಜೊತೆಗೆ ನಡೆಸಿದ ಈ "ಆತ್ಮೀಯ ಸಂವಾದ"ದ ಅಥವಾ "ಗುಪ್ತಸಮಾಲೋಚನೆ"ಯ ಬಳಿಕ ವ್ಯಕ್ತಿ ಇಡುವ ಹೆಜ್ಜೆಗಳೇನು? ಮಗುವಿನ ಆಹಾರ, ಆರೋಗ್ಯ, ಬೆಳವಣಿಗೆ ಮಂತಾದವನ್ನು ಕುರಿತಂತೆ ತಜ್ಞ ವೈದ್ಯರ ಸಲಹೆ ಪಡೆಯುವುದಕ್ಕಿಂತ ಹೆಚ್ಚಾಗಿ ಮಾಟ, ಮಂತ್ರ, ಮೋಡಿಗಳಿಗೆ ಶರಣಾಗುವುದು ಅಲ್ಲವೇ? ಎಲ್ಲವೂ ಸರಿಯಾದರೆ ದೇವತೆಗಳ ಜೊತೆ ಜೋಯಿಸ ಮಾಡಿದ ಸಂಧಾನ ಮತ್ತು ನಾವು ದೇವತೆಗಳಿಗೆ ಒಪ್ಪಿಸಿದ ಪೂಜೆಯ ಫಲವಾಗಿ ಕಂಟಕಗಳು ತಪ್ಪಿದುವೆಂಬ ಸಂತೃಪ್ತಿ. ಇಷ್ಟು ಮಾಡಿಯೂ ಫಲಿತಾಂಶ ವಿಪರೀತವಾದರೆ "ಗ್ರಹಚಾರ ನೆಟ್ಟಗಿಲ್ಲ," "ಶಿವನ ಇಚ್ಛೆ ಬಲ್ಲವರಾರೋ!" ಅಥವಾ "ಪೂರ್ವಜನ್ಮದ ಪಾಪ ಶೇಷ" ಎಂಬ ಒತ್ತುಗಂಬಗಳು ಹೇಗೂ ಇದ್ದೇ ಇವೆ.

ಈಗ ನಿಮಗೆ ಕೆಲವು ಪ್ರಶ್ನೆಗಳನ್ನು ಹಾಕುತ್ತೇನೆ. ನೀವು ಕೊಡಬಹುದಾದ ಉತ್ತರಗಳನ್ನು ಅಲ್ಲೇ ಕೆಳಗೆ ಕಾಣಿಸುತ್ತೇನೆ.

ಪ್ರಶ್ನೆ : ಜೋಯಿಸನ ಮಾತನ್ನು ನೀವು ಪ್ರಶ್ನಿಸದೇ, ಅಥವಾ ಕನಿಷ್ಠ ಪಕ್ಷ ಚರ್ಚಿಸದೇ, ತೀರ ಮುಗ್ಧರಂತೆ ಒಪ್ಪಿದ್ದೇಕೆ?

ಉತ್ತರ : ಪರಂಪರೆಯಿಂದ ನಡೆದು ಬಂದಿರುವ ಒಂದು ಅನಿವಾರ್ಯ ವಿಧಿ ಅದು. ಹಾಗೆ ಮಾಡಿದ್ದರಿಂದ ಒಳ್ಳೆಯದಾಗಿದೆಯೋ ಇಲ್ಲವೋ ನಮಗೆ ತಿಳಿಯದು, ಆದರೆ ಕೆಟ್ಟದ್ದಂತೂ ಖಂಡಿತ ಆಗಿರುವುದಿಲ್ಲ.

ಪ್ರಶ್ನೆ : ಯಾವುದೇ ನಂಬಿಕೆ ಅಥವಾ ಆಚರಣೆ ಎಷ್ಟು ಹಳೆಯದು, ಎಷ್ಟು ಜನರ ಮನ್ನಣೆ ಪಡೆದಿದೆ, ಅದನ್ನು ಪುರಸ್ಕರಿಸುವ ಧುರೀಣರ ಸಾಮಾಜಿಕ ಅಥವಾ ಧಾರ್ಮಿಕ ಅಂತಸ್ತು ಏನು ಇತ್ಯಾದಿ ಕಾರಣಗಳಿಂದ ಅದು ನಿಜ ಅಥವಾ ಪ್ರಸ್ತುತ ಆಗಬೇಕಾಗಿಲ್ಲ. ಅದನ್ನು ಕುತೂಹಲದ ಅಥವಾ ತಿಳಿವಳಿಕೆಯ ದೃಷ್ಟಿಯಿಂದ ಪ್ರಶ್ನೆಯ ಒರೆಗಲ್ಲಿಗೆ ತೀಡದಿದ್ದರೆ

ವ್ಯಕ್ತಿ ಬೆಳೆಯುವುದಿಲ್ಲ. ಬೌದ್ಧಿಕವಾಗಿ ನೀವು ಬೆಳೆಯಲು ಬಯಸುವುದಾದರೆ ಯಾವುದನ್ನೂ ಕಣ್ಣು ಮುಚ್ಚಿ ಒಪ್ಪಿಕೊಳ್ಳಬೇಡಿ.

ಉತ್ತರ : ಸರಿ. ಹಾಗಾದರೆ ವೈದ್ಯನ ಸಲಹೆಯಲ್ಲಿ ತಳೆಯುವಂಥ ಭರವಸೆಯನ್ನು ಜೋಯಿಸನ ಮಾತಿನಲ್ಲಿಯೂ ಇಡುವುದು ತಪ್ಪೇ ?

ಪ್ರಶ್ನೆ : ಈ ಹೋಲಿಕೆ ಸರಿಯಲ್ಲ. ವೈದ್ಯ ನಿಮ್ಮ ಆರೋಗ್ಯವನ್ನು ತಪಾಸಣೆ ಮಾಡುವ ವಿಧಾನ ಏನು ? ಪ್ರಶ್ನೆ, ಪರೀಕ್ಷೆ, ಪ್ರಯೋಗ ಮತ್ತು ಖಚಿತ ಶಾಸ್ತ್ರಾಧಾರಗಳಿಂದ ರೋಗದ **ಕಾರಣ**ವನ್ನು ನಿರ್ಧರಿಸುತ್ತಾನೆ. ಈ **ಕಾರಣ**ದಿಂದ ಆ **ಕಾರ್ಯ** ಆಯಿತು, ಅಂದರೆ ಆ ರೋಗ ಬಂದಿತು ಎಂದು ತೀರ್ಮಾನಿಸುತ್ತಾನೆ.

ಉತ್ತರ : ಸ್ವಲ್ಪ ವಿವರಿಸಿ.

ಪ್ರಶ್ನೆ : ವೈದ್ಯನ ದೃಷ್ಟಿಯಲ್ಲಿ ಪ್ರತಿಯೊಂದು ರೋಗದ ಹಿನ್ನೆಲೆಯಲ್ಲಿಯೂ ಹಲವಾರು ಕಾರಣಗಳಿವೆ. ಅಂದರೆ ಈ ಕಾರಣಗಳ ಅಂತಿಮ ಉತ್ಪನ್ನವಾಗಿ ಆ ರೋಗ ಪ್ರಕಟವಾಗುತ್ತದೆ. ಇದೇ **ಕಾರ್ಯ**.

ಉತ್ತರ : ಜಡಿ ಮಳೆಯ ಹೊಡೆತದಿಂದ ಗುಡಿ ಕುಸಿದು ಬಿದ್ದಿತೆನ್ನೋಣ. ಇಲ್ಲಿ ಮನೆ ಕುಸಿತ **ಕಾರ್ಯ** ಮಳೆ ಹೊಡೆತ **ಕಾರಣ** ಎನ್ನಬಹುದೇ ?

ಪ್ರಶ್ನೆ : ಗುಡಿ ಕುಸಿತವೇನೋ **ಕಾರ್ಯ** ಹೌದು. ಮಳೆ ಹೊಡೆತದ ಜೊತೆಗೆ ಇತರ 'ಕಾರಣ'ಗಳೂ ಸೇರಿರುವುದು ಸಾಧ್ಯ.

ಉತ್ತರ : ಕಳಪೆ ಕಾಮಗಾರಿ, ಅಡಿಪಾಯದಲ್ಲಿ ಕುಸಿತ, ಗೋಡೆಗಳು ತೀರ ಹಳೆಯದಾಗಿರುವುದು ......

ಪ್ರಶ್ನೆ : ನಿಜ, ಇವೆಲ್ಲವೂ 'ಕಾರಣ'ದ ನಿರ್ಣಾಯಕಗಳು. ಈಗ, ರೋಗದ ಸಂದರ್ಭದಲ್ಲಿ ವೈದ್ಯ ಪತ್ತೆ ಹಚ್ಚುವುದು ಈ ವಿವಿಧ ಕಾರಣಗಳ ಸಮುಚ್ಚಯವನ್ನು. ಹೀಗೆ, ಕಾರ್ಯ-

ಕಾರಣ ಸಂಬಂಧ ನಿರ್ಧರಿಸಿದಾಗ ರೋಗನಿವಾರಣೆಗೆ ಮಾರ್ಗ ಸುಲಭವಾಗಿ ಹೊಳೆಯುತ್ತದೆ.

ಉತ್ತರ : ಕಾರಣವನ್ನು ರದ್ದುಗೊಳಿಸುವುದು ಅಲ್ಲವೇ?

ಪ್ರಶ್ನೆ : ಹೌದು. ಔಷಧಿ, ಪಥ್ಯ, ವಿಶ್ರಾಂತಿ ಮುಂತಾದವು ಮಾಡುವುದು ಇದೇ ಕೆಲಸವನ್ನು.

ಉತ್ತರ : ಒಪ್ಪುತ್ತೇನೆ. ಜೋಯಿಸನಾದರೂ ನಡೆಯುವುದು ಇಂಥ ಒಂದು ಹಾದಿಯಲ್ಲಿಯೇ. ಪಂಚಾಂಗ ಆತನ ಆಧಾರ ಗ್ರಂಥ. ನಮ್ಮ ಕಷ್ಟ ಸಂಕಷ್ಟಗಳಿಗೆ ಕಾರಣವಾಗುವ ಗ್ರಹಗಳ ಬಗೆಗಿನ ಮಾಹಿತಿಯನ್ನು ಆತ ಪಂಚಾಂಗದಿಂದ ಹೆಕ್ಕಿ, ವೈದ್ಯನಂತೆ, ನಮಗೆ ಯುಕ್ತ ಪರಿಹಾರ ಒದಗಿಸುತ್ತಾನೆ.

ಪ್ರಶ್ನೆ : ನಿಮ್ಮ ಕಷ್ಟ ಸಂಕಷ್ಟಗಳಿಗೆ ಆಕಾಶದ ಹಿರಿ ಎತ್ತರಗಳಲ್ಲಿ ಮತ್ತು ಅತಿ ದೂರಗಳಲ್ಲಿ ಹರಡಿ ಹೋಗಿರುವ ಆ ನಿರ್ಜೀವ ಕಾಯಗಳು ಖಂಡಿತವಾಗಿಯೂ ಕಾರಣವಲ್ಲ. ಈ ತಾಪತ್ರಯಗಳು ಇಲ್ಲಿಯ ಸಮಸ್ಯೆಗಳು. ಎಂದೇ ಇವುಗಳಿಗೆ ಪರಿಹಾರಗಳನ್ನು ಇಲ್ಲಿಯೇ ಅರಸಬೇಕು. ಇಲ್ಲದ ಅಲ್ಲಿಗೆ, ಅರಿಯದ ಜೋಯಿಸನ ಮೂಲಕ, ಅಂಕೆಸಂಖ್ಯೆಗಳ ಸಮುಚ್ಚಯವಾದ ಪಂಚಾಂಗವನ್ನು ಆಶ್ರಯಿಸಿ ಸಾಗುವುದಲ್ಲ.

ಪ್ರಶ್ನೆ : ಹಾಗಾದರೆ ಪಂಚಾಂಗ ಎಂದರೇನು ? (ನೋಡಿ ಪುಟ 32)

ಕಾಲ ಅಳತೆಗೆ ಸಿಗುವುದೇ ?

ಆಧುನಿಕ ವಿಜ್ಞಾನದ ಪ್ರಕಾರ ರಚಿಸಿರುವ ಪ್ರಸಿದ್ಧ ಪಂಚಾಂಗ ಒಂದರ ಮುಖಪುಟವನ್ನು ಪುಟ 10 ರಲ್ಲಿ ಕಾಣಿಸಿದೆ. ಇದರಲ್ಲಿಯ ಎರಡು ಮುಖ್ಯ ಅಂಶಗಳಿವು :


ಗ.ಶಾ.ಶಕ 1917; ಇಸವಿ 1995-96.

"ಗ.ಶಾ." ಎಂದರೆ ಗತ ಶಾಲಿವಾಹನ ಎಂದೂ "ಇಸವಿ" ಎಂದರೆ ಕ್ರಿಸ್ತಶಕ ಎಂದೂ ಅರ್ಥ. ವರ್ಷಗಳನ್ನು ಸೂಚಿಸಲು ಬಳಸುವ ಎರಡು ಪ್ರಮುಖ ಮಾನಕಗಳಿವು. ಈಗ ನಡೆಯುತ್ತಿರುವ ಅದೇ ವರ್ಷವನ್ನು ಅಂದರೆ ವರ್ತಮಾನವನ್ನು 1917 ಮತ್ತು 1995-96 ಎಂಬ ಎರಡು ಸಂಖ್ಯೆಗಳು ಸೂಚಿಸುವುದು ಏಕೆ? ಹೇಗೆ?

'ವರ್ಷ' ಎಂಬುದು 'ಕಾಲ'ದ ಒಂದು ಮಾನಕ (ಅಳತೆ). ಕಾಲ ಎಂದರೇನು? ಇದೊಂದು ಅನುಭವ. ಇದರಲ್ಲಿ ಮೂರು ವಿಭಾಗಗಳಿವೆ : ಹಿಂದು, ಇಂದು, ಮುಂದು; ಅಥವಾ ಭೂತ, ವರ್ತಮಾನ, ಭವಿಷ್ಯ. ನಾವು ಬದುಕಿರುವುದು ವರ್ತಮಾನದಲ್ಲಿ ಮಾತ್ರ. ಭೂತಕ್ಕೆ ಮರಳಲಾರೆವು, ಭವಿಷ್ಯಕ್ಕೆ, ತೆರಳಲಾರೆವು. ಈ ವರ್ತಮಾನವಾದರೂ, ನಮ್ಮ ಯಾವ ಪ್ರಯತ್ನವೂ ಇಲ್ಲದೆ, ಹೊಳೆಯ ಹರಿವಿನಂತೆ, ಸತತವಾಗಿ ಮುಂದಕ್ಕೆ ಮುಂದಕ್ಕೆ ಜಗುಳುತ್ತಲೇ ಇರುವುದು. ಅಡೆತಡೆ ಇರದೆ ಸದಾ ಮುಮ್ಮೊಗವಾಗಿ ಒಂದೇ ದರದಲ್ಲಿ ಸರಿಯುತ್ತದೆ ಕಾಲಪ್ರವಾಹ.

ಕಾಲಮಾಪನೆ ಹೇಗೆ? ಹೊಳೆದಂಡೆಯಲ್ಲಿ ಕೆಲವು ಸ್ಥಿರ ಗುರುತುಗಳನ್ನು ಆಯ್ದು ನೀರಿನ ಜಾಡಿಗೆ ಗಡಿ ನೆಡುವುದು ಸರಿಯಷ್ಟೆ. ಇದೇ ಪ್ರಕಾರ ಕಾಲದ ಓಟದಲ್ಲಿ ಹಲವಾರು 'ವಸ್ತು'ಗಳನ್ನು 'ನೆಡು'ತ್ತೇವೆ. ಇವುಗಳಿಗೆ 'ಘಟನೆ'ಗಳೆಂದು ಹೆಸರು. ನಿನ್ನೆಯ ಸೂರ್ಯೋದಯ ಒಂದು ಘಟನೆ, ಇಂದಿನದು ಇನ್ನೊಂದು. ಇವೆರಡರ ನಡುವೆ ಸಂದ 'ಅವಧಿ'ಯನ್ನು 'ದಿವಸ' ಎನ್ನುತ್ತೇವೆ. ಕಾಲಪ್ರವಾಹದಲ್ಲಿ ನಾವು ನಮ್ಮ ಅನುಕೂಲತೆಯ ಸಲುವಾಗಿ ಗುರುತಿಸಿದ ಒಂದು 'ಖಂಡ'ವಿದು. ಇಲ್ಲಿ ಸೂರ್ಯನನ್ನು ಆಧಾರವಸ್ತುವಾಗಿ ಆಯ್ದಿರುವುದರಿಂದ ಇದು 'ಸೌರಮಾನ' ದಿವಸ, ಸರಳವಾಗಿ 'ಸೌರ' ದಿವಸ.


ಅಮಾವಾಸ್ಯೆ - ಹುಣ್ಣಿಮೆ - ಅಮಾವಾಸ್ಯೆ - ಹುಣ್ಣಿಮೆ - .... ಈ ರೀತಿಯ



ಘಟನೆಗಳ ನಡುವಿನ ಅವಧಿಯೇ ಕಾಲ

ನಿರಂತರ ಮುನ್ನಡೆ ನಮಗೆ ಎದ್ದು ಕಾಣುತ್ತದೆ. ಚಂದ್ರನ ವಿವಿಧ ವರಿಸೆ ವಿನ್ಯಾಸಗಳನ್ನು ಅವಲಂಬಿಸಿ ಈ ಪಥಕ್ರಮಣ ಉಂಟು. ಅಮಾವಾಸ್ಯೆ-ಹುಣ್ಣಿಮೆ ಕಾಲಖಂಡವನ್ನು **ಶುಕ್ಲ ಪಕ್ಷ**ವೆಂದೂ ಹುಣ್ಣಿಮೆ-ಅಮಾವಾಸ್ಯೆ ಕಾಲಖಂಡವನ್ನು **ಕೃಷ್ಣ ಪಕ್ಷ**ವೆಂದೂ ಹೇಳುತ್ತೇವೆ. ಪಕ್ಷದಲ್ಲಿ ಸುಮಾರು 14/15 ದಿವಸಗಳುಂಟು. ಅಮಾವಾಸ್ಯೆಯಿಂದ ಮುಂದಿನ ಅಮಾವಾಸ್ಯೆ ತನಕ ಸಲ್ಲುವ ಎರಡು ಪಕ್ಷಗಳ ಮೊತ್ತಕ್ಕೆ 'ಮಾಸ' ಅಥವಾ 'ತಿಂಗಳು' ಎಂದು ಹೆಸರು. ತಿಂಗಳಿನಲ್ಲಿ ಸುಮಾರು 29/30 ದಿವಸಗಳುಂಟು. ಇಲ್ಲಿ ಚಂದ್ರನನ್ನು ಆಧಾರವಸ್ತುವಾಗಿ ಆಯ್ದಿರುವುದರಿಂದ ಇದು 'ಚಾಂದ್ರಮಾನ' ಮಾಸ, ಸರಳವಾಗಿ 'ಚಾಂದ್ರ' ಮಾಸ.

ಈಗ ನಿಮಗೇ ತಿಳಿಯುತ್ತದೆ : 'ಘಟನೆ'ಗಳ ನಡುವಿನ 'ಅವಧಿ'ಯೇ 'ಕಾಲ.' ಇದೇ ರೀತಿ 'ಸ್ಥಳ'ಗಳ ನಡುವಿನ 'ಅಂತರ'ವೇ 'ದೇಶ.' ಒಂದು ನೆಲೆಯಿಂದ (ಅಥವಾ ಸ್ಥಳದಿಂದ) ಇನ್ನೊಂದು ನೆಲೆಗೆ ಹೋಗುವಾಗ - ಇದು ನಮ್ಮ ದೈನಂದಿನ ಚಟುವಟಿಕೆಯ ಅವಿಭಾಜ್ಯ



ಕ್ರಮಿಸಿದ ದೂರ = ವೇಗ × ಕಾಲ

$$s = v \times t$$

ಭೌತ ತ್ರಿಭುಜ. ಇದರ ಭುಜಗಳು ಕಾಲ, ದೇಶ ಮತ್ತು ವೇಗ. ಒಂದಿಲ್ಲದೇ ಉಳಿದೆರಡು ಇರವು.
ಕಾಲ ಸರಿಯದಿದ್ದರೆ ? ದೇಶವಿರದಿದ್ದರೆ ? ಚಲನೆ (ವೇಗ) ಸಂಭವಿಸದಿದ್ದರೆ ?
ಆಗ ಬದುಕೇ ಇರುತ್ತಿರಲಿಲ್ಲ !

ಅಂಗ ಎಂಬುದೂ ನೆನಪಿರಲಿ. 'ಕಾಲ' ಸಲ್ಲುತ್ತದೆ, 'ವೇಗ' ತಳೆದಿದ್ದೇವೆ, 'ದೇಶ' ಅಥವಾ 'ದೂರ' ಕ್ರಮಿಸಿದ್ದೇವೆ. ಅಂದರೆ ದೂರವನ್ನು ಕಾಲದಲ್ಲಿ ವೇಗಸಹಿತ ಚಲಿಸಿ ಕ್ರಮಿಸಿದ್ದೇವೆ. 'ದೂರ'ವನ್ನು 'ಕಾಲ'ದಿಂದ ಭಾಗಿಸಿದಾಗ ದೊರೆಯುವ ಲಬ್ಧವೇ 'ವೇಗ' ಎಂದು ನಿಮಗೆ ಗೊತ್ತಿದೆ. ಹೀಗೆ ಕಾಲ (ಹೊತ್ತು, ವೇಳೆ, ಸಮಯ) ದೇಶ (ದೂರ, ಅಂತರ) ಮತ್ತು ವೇಗ (ಚಲನೆ, ಸರಿತ) ಪರಸ್ಪರ ನಿಕಟ ಸಂಬಂಧ ಹೊಂದಿವೆ. ಭೌತವಿಶ್ವದ ಒಂದು ಸಾರ್ವತ್ರಿಕ ನಿಯಮವಿದು.

ದಿವಸ, ಪಕ್ಷ ಮತ್ತು ಮಾಸ ನಿಸರ್ಗದಿಂದ ನಮಗೆ ಲಭ್ಯವಾಗಿರುವ ಕೆಲವು ಕಾಲಖಂಡಗಳು. ಹಾಗಾದರೆ ವರ್ಷ? ಪ್ರತಿರಾತ್ರಿ ಒಂದೇ ಹೊತ್ತಿಗೆ ಬಾನನ್ನು ನೋಡಿ. ಆಗ ಅಲ್ಲಿ ಎದ್ದು ಕಾಣುವ ನಕ್ಷತ್ರ ಚಿತ್ರಗಳನ್ನು ಮತ್ತು ಅವುಗಳ ಸಾಪೇಕ್ಷ ನೆಲೆಗಳನ್ನು ಗುರುತಿಸಬೇಕು. ಅದೇ ವೇಳೆ ಪರಿಸರದಲ್ಲಿ ಸಂಭವಿಸುವ ವ್ಯತ್ಯಯಗಳನ್ನೂ ಸೂಕ್ಷ್ಮವಾಗಿ ಅವಲೋಕಿಸುತ್ತಿರಬೇಕು. ಸುಮಾರು 12 ತಿಂಗಳು ಉರುಳಿದಾಗ ಆಕಾಶ ಚಿತ್ರಗಳು ಹಿಂದಿನ


ಸಾಪೇಕ್ಷ ಸ್ಥಾನಗಳಿಗೆ ಮರಳಿರುವುದನ್ನೂ ಪರಿಸರದಲ್ಲಿ ಅವೇ ಪರಿಸ್ಥಿತಿಗಳು ಮರುಕೊಳಿಸುವುದನ್ನೂ ಕಾಣುತ್ತೇವೆ. ಈ ಅವಧಿಯಲ್ಲಿ ಸೂರ್ಯ ನಮ್ಮ ಸುತ್ತ ಒಂದು ಪ್ರದಕ್ಷಿಣೆ ಮುಗಿಸಿರುವುದೆಂದು ಪರೋಕ್ಷವಾಗಿ ತೀರ್ಮಾನಿಸುತ್ತೇವೆ. ಪ್ರದಕ್ಷಿಣೆಯ ದಿಶೆ ಪಶ್ಚಿಮದಿಂದ ಪೂರ್ವಕ್ಕೆ. ಪ್ರದಕ್ಷಿಣೆಯ ಅವಧಿಯೇ ವರ್ಷ.

ಇತ್ತ ನಮ್ಮ ಸುತ್ತಲಿನ ಪರಿಸರವನ್ನು ಗಮನಿಸೋಣ. ನಿಸರ್ಗ 'ಸೊಂಪು' ತಳೆದು ಹೂ ಹಣ್ಣುಗಳನ್ನು ಸಮೃದ್ಧವಾಗಿ ಹಡೆದಿದೆ. "ವಸಂತ ಬಂದ, ಋತುಗಳ ರಾಜ ತಾ ಬಂದ!" ಮುಂದೆ ಬರುವುದು 'ಬೇಸಗೆ' - ಒಣ ಒಣ ರಣ ರಣ ಧೂಳು ಕಸ. ಅಷ್ಟರಲ್ಲೇ ಪಸೆ ಪಸಿನೀರಿನ ವಾಸನೆ 'ಮಳೆ'ಯ ಕುಟ್ಟಣೆ : "ಶ್ರಾವಣಾ ಬಂತು ಕಾಡಿಗೆ ಬಂತು ನಾಡಿಗೆ ಬಂತು ಬೀಡಿಗೆ...." ಈ ತಂಪು ಇನ್ನಷ್ಟು ತಣಿದು 'ಚಳಿ' ಕೋರೈಸತೊಡಗುತ್ತದೆ. ಇದು ಮುಂದೆ 'ಸೊಂಪು' ಹಂಗಾಮಿಗೆ ಕೊಕ್ಕೊಡುತ್ತದೆ. ಹೀಗೆ ನಮ್ಮ ನೇರ ಅನುಭವಕ್ಕೆ ಬರುವ ಹವಾವ್ಯತ್ಯಯಗಳು ನಾಲ್ಕು : ಸೊಂಪು, ಬೇಸಗೆ, ಮಳೆ ಮತ್ತು ಚಳಿ. ಇವೇ ಹಂಗಾಮುಗಳು.

ಪರಿಸರ ವ್ಯತ್ಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ. ಅವುಗಳಲ್ಲಿ ಆರು ನಿರ್ದಿಷ್ಟ ಬಗೆಗಳನ್ನು ಗುರುತಿಸಲಾಗಿದೆ : ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ ಮತ್ತು ಶಿಶಿರ. ಇವೇ ಋತುಗಳು. ಹಂಗಾಮುಗಾಲಿಯ ಅಥವಾ ಋತುಚಕ್ರದ ಒಂದು ಉರುಳಾಟ ಮುಗಿಯುವಾಗ ಒಂದು ಸೌರವರ್ಷ ಕೊನೆಗೊಂಡಿರುತ್ತದೆ. ಅದೇ ವೇಳೆ ಸುಮಾರು 365 ಸೌರದಿವಸಗಳೂ ಸಂದಿರುತ್ತವೆ. ಆದ್ದರಿಂದ ಸ್ಥೂಲವಾಗಿ

ಒಂದು ಸೌರ ವರ್ಷ = 12 ಚಾಂದ್ರಮಾಸಗಳು

ಜ್ಞಾನವಿಜ್ಞಾನ ಇನ್ನೂ ಆರಂಭವಾಗುತ್ತಿದ್ದ ಪ್ರಾಚೀನ ದಿನಗಳಂದು ಸೌರವರ್ಷಕ್ಕೂ (365 ದಿವಸಗಳು) ಚಾಂದ್ರವರ್ಷಕ್ಕೂ (= 12 ಚಾಂದ್ರಮಾಸಗಳು = 354 ದಿವಸಗಳು) ನಡುವಿನ ಸುಮಾರು 10 ದಿವಸಗಳ ವ್ಯತ್ಯಾಸ ಅರಿವಿಗೆ ಬರದಿದ್ದುದೇ ಈ ಮೇಲಿನ ಸ್ಥೂಲ ಸಂಬಂಧದ ಕಾರಣ.



ಕಾಲಪ್ರವಾಹ ನೀರ ಹರಿವಿನಂತೆ : ಒಂದೇ ದಿಶೆಯ ಚಲನೆ, ಪ್ರವಾಹದ ವೇಗ ಏಕರೀತಿ ಇರುತ್ತದೆ.
ನಿಜಕ್ಕೂ ಕಾಲ ಕಳೆಯುವುದಲ್ಲ, ನಾವು ಕಳೆದೇ ಹೋಗುವೆವು !

ನಿಸರ್ಗವಿತ್ತಿರುವ ಗಗನ ಗಡಿಯಾರಗಳು

ನಿಸರ್ಗ ನಮಗೆ ಎರಡು ಗಗನ ಗಡಿಯಾರಗಳನ್ನು ಪ್ರದಾನಿಸಿದೆ. ಅವೇ ಸೂರ್ಯ, ಚಂದ್ರ. ಸೂರ್ಯನನ್ನು ನೇರ ನೋಡುವುದಾಗಲಿ ಸೂರ್ಯನ ಚಲನೆಯನ್ನು ಪ್ರತ್ಯಕ್ಷ ಕಾಣುವುದಾಗಲಿ ಸಾಧ್ಯವಾಗದು. ಚಂದ್ರ ಹೀಗಲ್ಲ. ಸುಲಭ ಗೋಚರ. ಸೌಮ್ಯ. ಅಲ್ಲದೆ ಚಂದ್ರನ ವರಿಸೆ ವಿನ್ಯಾಸಗಳು ಅತ್ಯಾಕರ್ಷಕ. ಈ ಕಾರಣಗಳಿಂದ ಚಂದ್ರ ನಮಗೆ ಆತ್ಮೀಯ ಸ್ನೇಹಿತನಾದ. ಸೂರ್ಯನಾದರೋ ಭಯಕಾರಕ ಪ್ರಭುವಾದ. ನಮ್ಮ ಹೆಚ್ಚಿನ ಹಬ್ಬ ಹರಿದಿನಗಳು (ಕ್ರಿಶ್ಚಿಯನ್ ಮತ್ತು ಇಸ್ಲಾಮ್ ಧರ್ಮಗಳಲ್ಲಿಯೂ ಇದು ನಿಜ : ಆದರೆ ಇರುವುದು ಒಬ್ಬನೇ ಮನುಷ್ಯ, ಆತ ಕಾಣುವುದು ಒಂದೇ ಆಕಾಶ) ಚಂದ್ರನನ್ನು (ಚಾಂದ್ರಮಾಸ) ಅನುಸರಿಸಿ ರೂಪುಗೊಂಡು ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗಗಳಾದುವು. ಸೌರ ಮತ್ತು ಚಾಂದ್ರವರ್ಷಗಳ ನಡುವಿನ ಅಲ್ಪ ವ್ಯತ್ಯಾಸ ಅರಿವಿಗೆ ಬರದೇ ಸುಲಭ ಚಾಂದ್ರಮಾನ

ಪದ್ಧತಿ ಚಲಾವಣೆಗೆ ಬಂದಿತು, ವರ್ಧಿಸಿತು, ಸರ್ವಾಪೋಶಿಸಿತು ! ಚೈತ್ರದಿಂದ ಫಾಲ್ಗುನದವರೆಗಿನ 12 ಚಾಂದ್ರಮಾಸಗಳು ಚಾಂದ್ರವರ್ಷದ ಅಷ್ಟು ಖಂಡಗಳು. ಆಯಾ ಹುಣ್ಣಿಮೆಯಂದು ಚಂದ್ರನ ನೆಲೆ ಅಥವಾ ನೆರೆಯಲ್ಲಿರುವ ಪ್ರಮುಖ ನಕ್ಷತ್ರದ ಹೆಸರಿನಿಂದ ಆ ಮಾಸವನ್ನು ಉಲ್ಲೇಖಿಸುವುದು ಸಂಪ್ರದಾಯ. ಹೀಗೆ ಚೈತ್ರ, ವೈಶಾಖ, ಜ್ಯೇಷ್ಠ, ಆಷಾಢ, ಶ್ರಾವಣ, ಭಾದ್ರಪದ, ಆಶ್ವಿನ,ಕಾರ್ತಿಕ, ಮಾರ್ಗಶಿರ, ಪೌಷ, ಮಾಘ ಮತ್ತು ಫಾಲ್ಗುನ ಎಂಬ ಹನ್ನೆರಡು ಚಾಂದ್ರಮಾಸಗಳು ಬಳಕೆಗೆ ಬಂದುವು. ಒಟ್ಟು ಅವಧಿ 354 ದಿವಸಗಳು.

ನಿಸರ್ಗದಲ್ಲಿ ಋತುಚಕ್ರ ಸೌರವರ್ಷದ ಗತಿಗೆ ಅನುಗುಣವಾಗಿ ಉರುಳುತ್ತಿದೆ. ಮಾನವನ ಜೀವನ ಚಕ್ರ ಇದಕ್ಕೆ ಹೊಂದಿಕೊಂಡಿದೆ. ಆದರೆ ಮೊದಲು ಚಲಾವಣೆಗೆ ಬಂದದ್ದು ಅರಿವಿಗೆ ಸುಲಭಗ್ರಾಹ್ಯವಾದ ಚಾಂದ್ರವರ್ಷ. ಇವೆರಡರ ನಡುವಿನ ವ್ಯತ್ಯಾಸ 365.2422 (ಸೌರ) - 354 (ಚಾಂದ್ರ) = 11.2422 ದಿವಸಗಳು. ಆದ್ದರಿಂದ ಚಾಂದ್ರವರ್ಷವನ್ನು ಅನುಸರಿಸುವವರು ಪ್ರತಿ ವರ್ಷ ಸುಮಾರು 11 ದಿವಸಗಳನ್ನು ಕಳೆದುಕೊಳ್ಳುವರು. ಪರಿಣಾಮವೇನು?

ಈ ಚಾಂದ್ರವರ್ಷ ಆರಂಭವಾಗುವಾಗ ವಸಂತಋತು ನಳನಳಿಸುತ್ತಿರುವುದೆಂದು ಭಾವಿಸೋಣ. ಆರು ಚಾಂದ್ರವರ್ಷಗಳು ಉರುಳುವಾಗ, ಋತುಚಕ್ರ, ಅಥವಾ ಸೌರವರ್ಷ ಕುರಿತಂತೆ, ಸುಮಾರು 67 ದಿವಸಗಳು ನಷ್ಟವಾಗಿರುತ್ತವೆ. ಅಂದರೆ ಏಳನೆಯ ಚಾಂದ್ರವರ್ಷ ಆರಂಭವಾಗುವಾಗ ವಸಂತ ಋತುವಿನ ಉಲ್ಲಾಸದ ಬದಲು ಶಿಶಿರ ಹೇಮಂತ ಋತುಗಳ (ಚಳಿಗಾಲ) ಕುಳಿರ್ ಕೊರೆಯುತ್ತಿರುವುದು. ಮತ್ತೆ ಕೆಲವು ವರ್ಷಗಳು ಸಲ್ಲುವಾಗ ಹೊಸ ವರ್ಷ ಮಳೆಗಾಲದ ನಡುವೆ ತೊಡಗುತ್ತದೆ. ವರ್ತುಳೀಯ ಓಟದ ಜಾಡಿನಲ್ಲಿ ಆರಂಭದ ಸ್ಥಾನ ಕ್ರಮೇಣ ಓಟದ ದಿಶೆಗೆ ಎದುರಾಗಿ (ಹಿನ್-) ಸರಿದರೇನಾದೀತೋ ಹಾಗೆ.

ಸೌರವರ್ಷ	ಸೌರವರ್ಷ	ಸೌರವರ್ಷ	ಸೌರವರ್ಷ
ಚಾಂದ್ರಮಾನ	ಚಾಂದ್ರಮಾನ	ಚಾಂದ್ರಮಾನ	ಚಾಂದ್ರಮಾನ

ನಿಜವರ್ಷವೆಂದರೆ ಸೌರವರ್ಷ. ಇದರ ಅವಧಿಗಿಂತ ಕಡಿಮೆಯದಾದ ಚಾಂದ್ರವರ್ಷವನ್ನು ಮಾನಕವಾಗಿ ಅಳೆದಾಗ ವರ್ಷದಿಂದ ವರ್ಷಕ್ಕೆ ನಾವು ಅನುಭವಿಸುವ ನಷ್ಟ ಹೆಚ್ಚು ಹೆಚ್ಚು ಆಗುತ್ತದೆ.

ಚಾಂದ್ರವರ್ಷದಲ್ಲಿ ಹಣುಕುವ ಈ ದೋಷವನ್ನು ಸರಿಪಡಿಸುವುದು ಹೇಗೆ ? ಈ ಅಸಹಜಮಾನಕವನ್ನು ತರಿದೊಗೆಯುವುದು ಕ್ಷೇಮ ಮಾರ್ಗ. ಆದರೆ ವ್ಯಕ್ತಿಯ, ಅಂತೆಯೇ ಸಮಾಜದ, ರಾಗ ಭಾವ ಧಾರ್ಮಿಕ ಶ್ರದ್ಧೆ ವಿಧಿ ನಿಯಮ ಆಚರಣೆ ಕುರಿತಂತೆ ಇಂಥ 'ನಿರಂಕುಶ' ಮತ್ತು 'ಉಗ್ರ' ಮಾರ್ಗವೆಂದೂ ವ್ಯಾವಹಾರ್ಯವಾಗದು. ಹೀಗಾಗಿ ಚಾಂದ್ರವರ್ಷಕ್ಕೆ ತಿದ್ದುಪಡಿ ಹಾಕಿ (ತೇಪೆಹೊಲಿದು) ಮತ್ತೆ ಅದನ್ನು ಋತುಚಕ್ರದ ಗತಿಯೊಂದಿಗೆ ಹೊಂದಿಸಲು ಶತಮಾನಗಳ ಹಿಂದೆ ಕ್ರಮ ಕೈಗೊಳ್ಳಲಾಯಿತು : 'ಅಧಿಕ ಮಾಸ'ದ ಸೇರ್ಪಡೆ, ಅಂದರೆನಿರ್ದಿಷ್ಟ ಚಾಂದ್ರವರ್ಷಗಳಿಗೆ ಹೆಚ್ಚಿನ ಒಂದು ತಿಂಗಳ ಕಸಿ. ಅಧಿಕ ವರ್ಷಗಳಲ್ಲಿ 13 ಚಾಂದ್ರಮಾಸ ಗಳಿರುತ್ತವೆ. ಈಚೆಗಿನ ನಾಲ್ಕು ನಿದರ್ಶನಗಳು :

ಇಸವಿ 1985 ಜುಲೈ 18ರಿಂದ ಆಗಸ್ಟ್ 16 ಅಧಿಕ ಶ್ರಾವಣ

ಇಸವಿ 1988 ಮೇ 16ರಿಂದ ಜೂನ್ 14 ಅಧಿಕ ಜ್ಯೇಷ್ಠ

ಇಸವಿ 1991 ಏಪ್ರಿಲ್ 15ರಿಂದ ಮೇ 14 ಅಧಿಕ ವೈಶಾಖ

ಇಸವಿ 1993 ಆಗಸ್ಟ್ 18ರಿಂದ ಸೆಪ್ಟೆಂಬರ್ 17 ಅಧಿಕ ಭಾದ್ರಪದ

ಇಲ್ಲಿ ಗಮನಿಸಬೇಕಾದ ಅಂಶ : ವರ್ಷದ ಅವಧಿ ಸ್ಥಿರವಾಗಿದೆ 365.2422 ದಿವಸಗಳು; ಇದನ್ನು ಅಳೆಯುವ 'ಉಪಕರಣ (ಚಾಂದ್ರಮಾಸ) ದೋಷಯುಕ್ತವಾಗಿದೆ; ಎಂದೇ ನಮಗೆ ದೊರೆಯುವ ಫಲಿತಾಂಶ ತಪ್ಪಾಗಿದೆ; ಆದ್ದರಿಂದ ಉಪಕರಣವನ್ನು ಪೂರ್ತಿ ಕಿತ್ತೊಗೆಯುವುದೊಂದೇ ಸರಿಯಾದ ಹಾದಿ. ಆದರೆ ನಾವು ಮಾಡುತ್ತಿರುವುದೇನು ? ಧರ್ಮ, ಪರಂಪರೆ, ಸಂಸ್ಕೃತಿ ಇಲ್ಲವೇ ನಂಬಿಕೆಯ ಹೆಸರಿನಲ್ಲಿ ಮುರುಕು ಉಪಕರಣಕ್ಕೆ ಹರಕು ತೇಪೆಯನ್ನು ಹೊಲಿಯುತ್ತಿರುವುದು ! ವರ್ತಮಾನ ವಿಜ್ಞಾನಯುಗದಲ್ಲಿ ಪ್ರಾಚೀನ ವಿಕಲ್ಪನೆಯ ಚಲಾವಣೆ. ಇಂಥ ಕೊಳಚೆ ನೆಲ ಫಲಜ್ಯೋತಿಷಿಗಳ (ಈ ಹಿಂದೆ ವಿವರಿಸಿದ ಜೋಯಿಸನಂಥವರ) ಹುಲುಸು ಹೊಲ.

ಸೂರ್ಯನ ಚಲನೆಯ ನೋಡೋಣ !

ಸಹಜವಾಗಿ ಒಂದು ಪ್ರಶ್ನೆ ಏಳುತ್ತದೆ : ಸಮರ್ಪಕ ಉಪಕರಣ ಯಾವುದು? ನೀವೇ ಉತ್ತರ ಹೇಳುವಿರಿ : ಸೌರವರ್ಷ (ಚಾಂದ್ರವರ್ಷ ಖಂಡಿತ ಅಲ್ಲ).

ನಮಗೆ (ಭೂನಿವಾಸಿಗಳಿಗೆ) ಭಾಸವಾಗುವಂತೆ ಸೂರ್ಯ ನಮ್ಮ ಸುತ್ತಲೂ ಆಕಾಶದಲ್ಲಿ, ಅಂದರೆ ಸ್ಥಿರ ನಕ್ಷತ್ರ ಚಿತ್ರಗಳಿಂದ ಅಲಂಕೃತವಾಗಿರುವ ಬಾನ ಪರದೆಯಲ್ಲಿ, ಪಶ್ಚಿಮ-ಪೂರ್ವ ದಿಶಾಚಲನೆಯಲ್ಲಿದೆ. ಒಂದು ಪರಿಭ್ರಮಣೆ ಮುಗಿಸಲು ಬೇಕಾಗುವ ಅವಧಿ, ಈ ಹಿಂದೆ ಹೇಳಿರುವಂತೆ, 365.2422 ದಿವಸಗಳು. ಇದರ ಅರ್ಥ : ಒಂದು ಸೌರವರ್ಷದಲ್ಲಿ ಭೂಮಿ ತನ್ನ ಸುತ್ತ 365.2422 ಸಲ ಸುತ್ತಿರುವುದು (ಆವರ್ತಿಸಿರುವುದು) ಎಂದು.

ವರ್ಷಾರಂಭ ಎಂದು ? ಅಥವಾ ಎಲ್ಲಿಂದ ? ವೃತ್ತ ಜಾಡಿನ ಮೇಲೆ ಓಡುತ್ತಿರುವಾತನಿಗೆ ಆರಂಭ ಬಿಂದುವೂ ಅಂತ್ಯ ಬಿಂದುವೂ ಒಂದೇ, ಆದರೆ ಎಲ್ಲಿ ? ಬೇಕಾದಲ್ಲಿ, ಅನುಕೂಲವಾದೆಡೆಯಲ್ಲಿ. ಆ ಅನುಕೂಲ ಆರಂಭ ಬಿಂದುವನ್ನು ನಮ್ಮ ಪೂರ್ವಜರು ಏಪ್ರಿಲ್ 14 ರಂದು ಸೂರ್ಯನ ನೆಲೆ ಎಂದು ನಿರ್ಧರಿಸಿದ್ದರು, ಸಕಾರಣವಾಗಿಯೇ. ಅಂದರೆ ಆ ದಿನಗಳಲ್ಲಿ ಏಪ್ರಿಲ್14ರಿಂದ ನೂತನ ವರ್ಷವನ್ನು ಎಣಿಸುತ್ತಿದ್ದರು. ಏನು ಹಿರಿಮೆ ?


ಅವರು ಬಾನು ನೋಡಿದರು, ಭಾನು ಚಲನೆ ಅನುಸರಿಸಿದರು, ಭೂಮಿಗೆ ಮರಳಿದರು, ಮತ್ತು ವಾಸ್ತವತೆಗೆ ವ್ಯಾಖ್ಯಾನ ನೀಡಿದರು. –

ಏಪ್ರಿಲ್ 14ರಂದು ಸೂರ್ಯ, ಕರಾರುವಾಕ್ಕಾಗಿ ಪೂರ್ವಬಿಂದುವಿನಲ್ಲಿ ಮೂಡಿ ಪಶ್ಚಿಮಬಿಂದುವಿನಲ್ಲಿ ಕಂತುತ್ತಿತ್ತು; ಅಂದು ಹಗಲು ಮತ್ತು ಇರುಳು ಅವಧಿಗಳು ಸಮವಾಗಿದ್ದುವು (ತಲಾ 12 ಗಂಟೆಗಳು); ಮತ್ತು ಅಂದಿನಿಂದ ಮುಂದೆ ಅಕ್ಟೋಬರ್ 17ರ ತನಕ ಹಗಲಿನ ಅವಧಿ (ಬೆಳಕಿನ ಉದ್ದೀಪನ) ಹಿರಿದೂ ಇರುಳಿನ ಅವಧಿ (ಕತ್ತಲೆಯ ಸಂಕೋಚನ) ಕಿರಿದೂ ಆಗುತ್ತಿದ್ದವು. ಅಕ್ಟೋಬರ್ 17ರಿಂದ ಮುಂದೆ ಏಪ್ರಿಲ್ 14ರ ತನಕ ಪರಿಸ್ಥಿತಿ ತಿರುಗಾಮುರುಗಾ ಆಗುತ್ತಿತ್ತು. ಇರುಳಿನದು ಮೇಲ್ಮೈ. ಹಗಲಿನದು ಇಳಿಗೈ. ಎಂದೇ ಈ ವಿಶೇಷ ಗುಣಸಂಪನ್ನ ಮತ್ತು ಉತ್ಸಾಹದ ಹರಿಕಾರ ಏಪ್ರಿಲ್ 14ಕ್ಕೆ ಅತಿಶಯ ಮಹತ್ತ್ವ ಪ್ರಾಪ್ತವಾಯಿತು. ಅದು ಸೌರ ಯುಗದ ಆದಿ - ಸೌರ ಯುಗಾದಿ; ವಸಂತ ಋತುವಿನ ಆರಂಭ; ಸೂರ್ಯ ವಿಷುವದ್ವೃತ್ತದ ಮೇಲಿರುವ ದಿನ; ಆದ್ದರಿಂದ ವಸಂತ ವಿಷುವ. ಏಪ್ರಿಲ್14, ಸೌರಯುಗಾದಿ, ವಸಂತವಿಷುವ ಇವು ಪರ್ಯಾಯ ಪದಗಳಾಗಿ ವಿಜೃಂಭಿಸಿದುವು. ಅಂದು ಸಂತೋಷ, ಸಂಭ್ರಮ, ಉಲ್ಲಾಸಗಳ ಸಂಗಮ. ಎಂದೇ ಹಬ್ಬ, ನಿಸರ್ಗದ ಕಬ್ಬ!


ಸೌರವರ್ಷದಲ್ಲಿ 12 ತಿಂಗಳು ಇರುವುದರಿಂದ, ಭೂಮಿಯ ಸುತ್ತ ಸೂರ್ಯನ ವಾರ್ಷಿಕ ಕಕ್ಷೆಯನ್ನು, ಅಷ್ಟು ಸಮಖಂಡಗಳಾಗಿ ವಿಭಾಗಿಸಿದೆ. ಇವು ಸೂರ್ಯನ 12 ಮನೆಗಳು, ದ್ವಾದಶ ರಾಶಿಗಳು. ಪಶ್ಚಿಮ-ಪೂರ್ವ ದಿಶೆಯಲ್ಲಿ ಮೇಷ, ವೃಷಭ, ಮಿಥುನ, ಕರ್ಕಟಕ, ಸಿಂಹ, ಕನ್ಯಾ, ತುಲಾ ವೃಶ್ಚಿಕ, ಧನು, ಮಕರ, ಕುಂಭ, ಮೀನ. ಈ ರಾಶಿಚಕ್ರ ಗಗನಕ್ಕೆ ಮಾನವನ ಕಲ್ಪನೆ ತೊಡಿಸಿದ ಡಾಬು, ಆಕಾಶನಾಟಕ ನೋಡಲು ಒದಗುವ ನಕ್ಷತ್ರಾಂಕಿತ ಪರದೆ. ನಿಜಸ್ಥಿತಿ ಏನು ಗೊತ್ತೇ ? ಆ ರಾಶಿಗಳು ಅಲ್ಲಿಲ್ಲ, ಯಾವುದೇ ರಾಶಿಯ ನಕ್ಷತ್ರಗಳು ಪರಸ್ಪರ ಸಂಬಂಧಿತವಾಗಿಲ್ಲ. ವಾಸ್ತವವಾಗಿ ಆಕಾಶದ ನೀಲಗೋಳವೇ ಒಂದು ಸಾಮೂಹಿಕ ಸಾರ್ವಕಾಲಿಕ ಭ್ರಮೆ! ನಭೋಮಂಡಲದ ಅಗಾಧತೆ ಒಂದು ಕಡೆ, ನಮ್ಮ ಅತಿಸೀಮಿತತೆ ಇನ್ನೊಂದು ಕಡೆ ಇವು ಸೇರಿ ನಮ್ಮೆಲ್ಲರ ಮನಗಳಲ್ಲಿ ಶಾಶ್ವತವಾಗಿರುವಂತೆ

ರೂಪಿಸಿರುವ ಮಿಥ್ಯಾಚಿತ್ರವನ್ನು ನಾವು ಕಾಣುತ್ತಿರುವುದು ! ಆದ್ದರಿಂದ ಆಕಾಶ ನೋಡುವಾಗ ಮತ್ತು ಅದರ ಬಗೆಗಿನ ವರ್ಣರಂಜಿತ ವಿವರಗಳನ್ನು ಫಲಜ್ಯೋತಿಷಿಗಳಿಂದ ಆಲಿಸುವಾಗ ಈ ಮೂಲಭೂತ ಸಂಗತಿ ತಿಳಿದಿರುವುದು ಅಗತ್ಯ. ಇಲ್ಲವಾದರೆ, ಹಿಂದೆ ಉಲ್ಲೇಖಿಸಿದ ರಾಮಣ್ಣನಂತೆ, ನಾವು ಸುಲಭವಾಗಿ ಮೋಸವಶರಾಗುವೆವು.

ಸೂರ್ಯ ಸಾಧಾರಣವಾಗಿ ಏಪ್ರಿಲ್ 14ರಂದು ಮೀನರಾಶಿಯಿಂದ ಮೇಷ ರಾಶಿಗೆ ಪ್ರವೇಶಿಸುತ್ತದೆ. ಆದ್ದರಿಂದ ಅಂದು ಮೇಷ ಸಂಕ್ರಮಣ. ಆಕಾಶದ ಸ್ಥಿರ ನಕ್ಷತ್ರ ಚಿತ್ರಗಳ



— ಅಂದು —



— ಇಂದು —

ಅಂದು ಮೇಷ ಇದ್ದಲ್ಲಿಯೇ ಇಂದು ಕೂಡ ಇದೆ. ಆದರೆ ಅಂದು ಮೇಷ (ನಕ್ಷತ್ರರಾಶಿ) ಕ್ರಾಂತಿ ಮತ್ತು ವಿಷುವದ್ವೃತ್ತಗಳ ಸಂಧಿಬಿಂದು ಆಗಿತ್ತು. ಇಂದು ಆ ಸಂಧಿಬಿಂದು ಹಿಂದಕ್ಕೆ (ಪೂರ್ವ-ಪಶ್ಚಿಮ) ಸಂದಿದೆ. ಎಂದೇ ಮೇಷ ಮುಂದಕ್ಕೆ (ಪಶ್ಚಿಮ-ಪೂರ್ವ) ಸಂದಿರುವಂತೆ ನಮಗೆ ಭಾಸವಾಗುತ್ತದೆ.

ಮುನ್ನೆಲೆಯಲ್ಲಿ ಈ ಸಂಕ್ರಮಣವನ್ನು ಇಂದಿನಂತೆ ಅಂದು ಕೂಡ ಪರೋಕ್ಷವಾಗಿ ಗುರುತಿಸಿದರು. ಹೀಗಾಗಿ "ಏಪ್ರಿಲ್ 14, ಮೇಷ ಸಂಕ್ರಮಣ, ಸೌರ ಯುಗಾದಿ, ವಸಂತ ವಿಷುವ" ಇವು ಅಭಿನ್ನ, ಅನ್ಯೋನ್ಯ ಘಟನೆಗಳು, ಅಥವಾ ಒಂದೇ ಘಟನೆಯ ಪರ್ಯಾಯ ವಿವರಣೆಗಳು ಎಂಬ ಕಲ್ಪನೆ ಮಾನವನ ಮನೋರೂಪಿಕೆಯಲ್ಲಿ ಮತ್ತು ಶಾಸ್ತ್ರವಿದರ ಆಧಾರಗ್ರಂಥಗಳಲ್ಲಿ ಭದ್ರ ನೆಲೆ ಗಳಿಸಿತು. ಮೇಷ ಸಂಕ್ರಮಣಕ್ಕೆ ಸೌರಯುಗಾದಿಯ ಹಿರಿಮೆ ಒದಗಿದ್ದು ಹೀಗೆ.

ನಮ್ಮ ಚಿಂತನೆ, ತರ್ಕ, ಊಹೆ ಮುಂತಾದವು ಏನೇ ಇರಲಿ, ಅವು ಆಕಾಶ ಘಟನೆಗಳನ್ನು ನಮ್ಮ ಮಿತಿಯಲ್ಲಿ ಗ್ರಹಿಸಿ ಅರ್ಥವಿಸಿ ಬರೆದಿರುವ ವಿವರಣೆಗಳು ಮಾತ್ರ. ಆ ಘಟನೆಗಳನ್ನು ಈ ವಿವರಣೆಗಳು ಸರಿಯಾಗಿ ವ್ಯಾಖ್ಯಾನಿಸಿವೆಯೇ ಎಂಬುದು ಮಾತ್ರ ಪ್ರಸ್ತುತವಾಗುತ್ತದೆ, ವಿನಾ, ಈ ವಿವರಣೆಗಳ ಅನುಸಾರ ಆ ಘಟನೆಗಳು ಜರಗುತ್ತಿವೆಯೇ ಎಂಬುದಲ್ಲ, ಎಂದೂ ಅಲ್ಲ. ಒಡಲಿಗೆ ಒಪ್ಪುವಂತೆ ಉಡುಪು ಇರತಕ್ಕದ್ದು, ಹೊರತು, ಉಡುಪಿಗೆ ಒಪ್ಪುವಂತೆ ಒಡಲು ಅಲ್ಲ, ಎಂದೂ ಅಲ್ಲ.

ವರ್ತಮಾನ ಸ್ಥಿತಿ ಏನು ಗೊತ್ತೇ ? ಆಕಾಶದಲ್ಲಿಯ ಘಟನೆಗಳು ಬದಲಾಗಿವೆ. ನಿರಂತರ ಬದಲಾವಣೆ ಅಥವಾ ವ್ಯತ್ಯಯವೇ ಸೃಷ್ಟಿ ನಿಯಮ. ಅಂದ ಮೇಲೆ ನಮ್ಮ ವಿವರಣೆಗಳನ್ನು ಹೊಸ ಸನ್ನಿವೇಶಕ್ಕೆ ಅನುಗುಣವಾಗಿ ಮಾರ್ಪಡಿಸಬೇಕಾದದ್ದು ಸರಿಯಾದ ಮಾರ್ಗ. ಆದರೆ ನಮ್ಮ ಧಾರ್ಮಿಕ ಮುಖಂಡರಾಗಲೀ ಸಾಮಾಜಿಕ ನಾಯಕರಾಗಲೀ ಹಾಗೆ ಮಾಡಿಲ್ಲ. ಮಾಡಬೇಕೆಂಬ ಕಾಳಜಿಯೂ ಕಾಣಬರುತ್ತಿಲ್ಲ. ಹೋಲಿಕೆ ನೋಡಿ :

ಘಟನೆ	ಅಂದು	ಇಂದು
ವಸಂತವಿಷುವ	ಏಪ್ರಿಲ್ 14	ಮಾರ್ಚ್ 22
ಸೌರಯುಗಾದಿ	ಏಪ್ರಿಲ್ 14	ಏಪ್ರಿಲ್ 14
ಮೇಷ ಸಂಕ್ರಮಣ	ಏಪ್ರಿಲ್ 14	ಏಪ್ರಿಲ್ 14

ಅರ್ಥವೇನು ? ವರ್ಷಾರಂಭದಂದು ಸೂರ್ಯ ಪೂರ್ವಬಿಂದುವಿನಲ್ಲಿ ಮೂಡಿ ಪಶ್ಚಿಮ ಬಿಂದುವಿನಲ್ಲಿ ಕಂತಬೇಕು. ಅಂದು ಹಗಲು ಇರುಳು ಸಮ ಅವಧಿಯವಾಗಿರಬೇಕು. ಅಂದಿನಿಂದ ಮುಂದೆ 6 ತಿಂಗಳ ಪರ್ಯಂತ ಹಗಲಿನ ಅವಧಿ ಇರುಳಿನದ್ದಕ್ಕಿಂತ ದೀರ್ಘತರವಾಗುತ್ತ ಹೋಗಬೇಕು. ಇಂದು ಈ ಎಲ್ಲ ಗುಣಗಳೂ ಪ್ರಕಟವಾಗುವುದು ವಸಂತ ವಿಷುವದಂದು ಮಾತ್ರ, ಮಾರ್ಚ್ 22, ಉಳಿದ ಯಾವುದೇ ದಿನಾಂಕದಂದು ಅಲ್ಲ. ಇಂದು ಮೇಷ ಸಂಕ್ರಮಣವನ್ನು, ಅಂದರೆ ಏಪ್ರಿಲ್ 14ನ್ನು, ಯುಗಾದಿ ಎಂದು ಆಚರಿಸುವುದು ಅರ್ಥಹೀನ ಮೂಢ ಸಂಪ್ರದಾಯ. ಚಾಂದ್ರ ಯುಗಾದಿಯಂತೆ ಇದು ಕೂಡ ಇಂದು ಒಂದು ಪಳೆಯುಳಿಕೆ. ಮೇಷ ಸಂಕ್ರಮಣ, ಇತರ 11 ಸಂಕ್ರಮಣಗಳಂತೆ, ಆಕಾಶದಲ್ಲಿ ಸಂಭವಿಸುವ ಒಂದು ಮಾಸಿಕ ಘಟನೆ ಮಾತ್ರ.

ನಿಸರ್ಗದ ಜೊತೆ ಸಮಶ್ರುತಿ ಸಮಗತಿಯಲ್ಲಿ ಬಾಳುವುದೇ ನಿಜ ಜೀವನ.

ಚಂದ್ರನ ಚಲನೆಯ ತಿಳಿಯೋಣ !

ಚಂದ್ರನ ಚಲನೆಯನ್ನು ಹಲವು ರಾತ್ರಿಗಳ ಪರ್ಯಂತ ಗಮನಿಸಬೇಕು. ಆಗ ಈ ಕೆಳಗಿನ ಕೆಲವು ಸುಲಭ ಸಂಗತಿಗಳು ನಿಮ್ಮ ಅರಿವಿಗೆ ಬರುವುವು :

- ನಿನ್ನೆ ಇರುಳು ಚಂದ್ರ ಈ ಹೊತ್ತಿಗೆ ಇದ್ದ ನೆಲೆಗಿಂತ ಸಾಕಷ್ಟು ಪೂರ್ವಕ್ಕೆ ಇಂದಿನ ನೆಲೆ ಇದೆ.
- ಚಂದ್ರನ ಈ ಪಶ್ಚಿಮ-ಪೂರ್ವ ಸರಿತ ಸುಮಾರು 27 ದಿವಸಗಳಲ್ಲಿ ಪೂರ್ಣವಾಗುತ್ತದೆ. ಅಂದರೆ, ನಕ್ಷತ್ರಗಳಿಗೆ ಸಾಪೇಕ್ಷವಾಗಿ ಚಂದ್ರ, ಅಷ್ಟು ದಿವಸಗಳ ಬಳಿಕ ಮೊದಲು ಹೊರಟಲ್ಲಿಗೆ ಮರಳಿರುತ್ತದೆ.
- ಚಾಂದ್ರಕಕ್ಷೆ (ಚಂದ್ರನ ಮಾಸಿಕ ಪಥ) ರಾಶಿಚಕ್ರದೊಳಗಿದೆ.


ಈ ಸೂಕ್ಷ್ಮ ಅಂಶಗಳನ್ನು ಪ್ರಾಚೀನ ಚಿಂತನಶೀಲರು ಗಮನಿಸಿದರು. ಅವರು ಚಾಂದ್ರ ಕಕ್ಷೆಯನ್ನು 27 ಸಮಖಂಡಗಳಾಗಿ ವಿಭಾಗಿಸಿದರು. ಒಂದೊಂದಕ್ಕೆ ಒಂದೊಂದು ನಕ್ಷತ್ರದ ಹೆಸರನ್ನು ನಿಗದಿ ಮಾಡಿದರು : ಅಶ್ವಿನಿ, ಭರಣಿ, ಕೃತ್ತಿಕ, ರೋಹಿಣಿ, ಮೃಗಶಿರಾ, ಆರ್ದ್ರಾ, ಪುನರ್ವಸು, ಪುಷ್ಯ, ಆಶ್ಲೇಷಾ, ಮಘಾ, ಪೂರ್ವ, ಉತ್ತರಾ, ಹಸ್ತಾ, ಚಿತ್ತಾ, ಸ್ವಾತೀ, ವಿಶಾಖಾ, ಅನೂರಾಧಾ, ಜ್ಯೇಷ್ಠಾ, ಮೂಲಾ, ಪೂರ್ವಾಷಾಢಾ, ಉತ್ತರಾಷಾಢಾ, ಶ್ರವಣಾ, ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರಾ, ಉತ್ತರಾಭಾದ್ರಾ, ರೇವತಿ.

ಸ್ಥೂಲವಾಗಿ ಚಂದ್ರ ಒಂದೊಂದು ರಾತ್ರಿ ಒಂದೊಂದು ನಕ್ಷತ್ರದ ದಿಶೆಯಲ್ಲಿ ಅಥವಾ ಬಳಿಯಲ್ಲಿ ತಂಗಿರುವಂತೆ ನಮಗೆ ಭಾಸವಾಗುತ್ತದೆ. ಆದ್ದರಿಂದ ಈ ನಕ್ಷತ್ರಗಳಿಗೆ ನಿತ್ಯನಕ್ಷತ್ರ ಗಳೆಂಬ ಹೆಸರು ಬಂದಿತು. ಇದು ನಮಗೆ ಕಾಣುವ ಚಿತ್ರ ಮಾತ್ರ. ಆಕಾಶದ ಅಪಾರ ದೂರಗಳಲ್ಲಿ ಮತ್ತು ಅಗಾಧ ವಿಸ್ತಾರದಲ್ಲಿ ಹರಡಿ ಹೋಗಿರುವ ಈ ನಕ್ಷತ್ರಗಳಿಗೂ ನಮಗೆ ತೀರ ಹತ್ತಿರವಿರುವ ಚಂದ್ರನಿಗೂ ಯಾವುದೇ ಬಗೆಯ ಸಂಬಂಧವೂ ಇಲ್ಲ. ಅತಿ ದೂರದ ವಿದ್ಯುತ್ತಂತಿ, ಬಾನಿಗೆಳೆದ ಗೆರೆಯಂತೆ ನಮಗೆ ಕಾಣುವುದೂ, ಅನುಕೂಲ ಸಂದರ್ಭದಲ್ಲಿ, ಸೂರ್ಯ ಅಥವಾ ಚಂದ್ರ ಬಿಂಬವನ್ನು ಕತ್ತರಿಸಿದಂತೆ ನಮಗೆ ಭಾಸವಾಗುವುದೂ ನಿಜ. ಆದರೆ ವಾಸ್ತವತೆ ಹಾಗಿಲ್ಲವೆಂಬುದು ನಮಗೆ ತಿಳಿದಿದೆ. ಇದೇ ಪ್ರಕಾರ ಸೂರ್ಯ ಚಂದ್ರರಿಗೂ ಇವುಗಳ ಕಕ್ಷೆಗಳ ನೇರ ಹರಡಿರುವ ನಕ್ಷತ್ರ ರಾಶಿಗಳಿಗೂ ವಾಸ್ತವತೆಯಲ್ಲಿ ಯಾವ ಸಂಬಂಧವೂ ಇಲ್ಲ.

ಚಂದ್ರನ ಚಲನೆಯನ್ನು ಇನ್ನೂ ಒಂದಿಷ್ಟು ಆಳವಾಗಿ ಪರಶೀಲಿಸೋಣ. ಆಗ ತಿಳಿಯುವ ಕೆಲವು ಹೆಚ್ಚಿನ ಸಂಗತಿಗಳಿವು :

* ಅಮಾವಾಸ್ಯೆಯಂದು ಚಂದ್ರಬಿಂಬ ನಾಪತ್ತೆ.

* ತರುವಾಯದ ಸುಮಾರು 14/15 ದಿವಸಗಳಲ್ಲಿ ಚಂದ್ರಬಿಂಬ (ಅಂದರೆ ಉಜ್ಜ್ವಲ ಭಾಗ) ಪಶ್ಚಿಮ-ಪೂರ್ವ ದಿಶೆಯಲ್ಲಿ ವಿಸ್ತರಿಸತೊಡಗುತ್ತದೆ. ಜೊತೆಯಲ್ಲೇ ಸೂರ್ಯ-ಚಂದ್ರ



ಚಂದ್ರನ ವಾಸ್ತವ ಚಲನೆಯ ದಿಶೆ ಪಶ್ಚಿಮ-ಪೂರ್ವ. ಆದರೆ ಖಗೋಳದ ಗೋಚರ ಚಲನ ದಿಶೆ ಪೂರ್ವ-ಪಶ್ಚಿಮ ಚಿತ್ರಗಳಲ್ಲಿ ಬಾಣ ಗುರುತುಗಳು ಈ ಗೋಚರ ಚಲನದಿಶೆಯನ್ನು ಸೂಚಿಸುತ್ತವೆ. ಅಮಾವಾಸ್ಯೆಯೆಂದು ಚಂದ್ರ, ಸೂರ್ಯ ಒಂದೇ ದಿಶೆಯಲ್ಲಿರುತ್ತವೆ. ಆರೇಳು ದಿವಸಗಳ ಬಳಿಕ ಅರ್ಧ ಉಜ್ಜ್ವಲ ಚಂದ್ರ ಸೂರ್ಯನಿಗಿಂತ ಹಿಂದೆ (ಪೂರ್ವ) ಇರುತ್ತದೆ. ಪಕ್ಷಾಂತ್ಯದಲ್ಲಿ ಸೂರ್ಯ, ಚಂದ್ರ ಎದುರುಬದಿರಾಗಿರುತ್ತವೆ; ಹುಣ್ಣಿಮೆ. ಮುಂದೆ ಆರೇಳು ದಿವಸಗಳು ಸಲ್ಲುವಾಗ ರಾತ್ರಿ ತೀರ ತಡವಾಗಿ ಚಂದ್ರ ಮೂಡುತ್ತದೆ. ಚಂದ್ರನ ಉಜ್ಜ್ವಲ ಪಾರ್ಶ್ವ ಸೂರ್ಯಾಭಿಮುಖವಾಗಿರುವುದು - ಸದಾ ! ಮುಂದೆ ಅಮಾವಾಸ್ಯೆ. ಹೀಗೆ ಚಂದ್ರನ ತಿಂಗಳ ವರಿಸೆ.

ಅಂತರ ಕೂಡ. ಹೀಗಾಗಿ ಆಕಾಶದ ದೈನಂದಿನ ಪೂರ್ವ-ಪಶ್ಚಿಮ ದಿಶೆಯ ಆವರ್ತನೆಯಲ್ಲಿ ಸೂರ್ಯನ ಹಿಂದೆ (ಪೂರ್ವಕ್ಕೆ) ಚಂದ್ರನಿದ್ದು ಪಶ್ಚಿಮಾಭಿಮುಖಿಯಾಗಿ ಸರಿಯುತ್ತಿರುವ ದೃಶ್ಯ ಕಾಣುತ್ತದೆ.

* 14/15 ದಿವಸಗಳ ಈ 'ಶುಕ್ಲಪಕ್ಷ' (ಚಂದ್ರಬಿಂಬ ವಿಸ್ತರಿಸುವ ಅವಧಿ) ಸಲ್ಲುವಾಗ ಸೂರ್ಯ-ಚಂದ್ರ ಎದುರುಬದಿರಾಗಿ ನಿಲ್ಲುತ್ತವೆ. ಅಂದು ಚಂದ್ರಬಿಂಬ ಪೂರ್ಣಗೊಂಡಿರುತ್ತದೆ. ಇದು ಹುಣ್ಣಿಮೆ.

* ತರುವಾಯದ ಸುಮಾರು 14/15 ದಿವಸಗಳಲ್ಲಿ ಚಂದ್ರಬಿಂಬ ಪಶ್ಚಿಮ-ಪೂರ್ವ ದಿಶೆಯಲ್ಲಿ ಸಂಕೋಚಿಸತೊಡಗುತ್ತದೆ. ಆದರೆ ಸೂರ್ಯ-ಚಂದ್ರ ಅಂತರ 180^0ಗಳನ್ನು ಮೀರಿ ವೃದ್ಧಿಸುತ್ತಿರುವುದು. ಅಂದರೆ ಪೂರ್ವ-ಪಶ್ಚಿಮ ದಿಶೆಯಲ್ಲಿ ಚಂದ್ರ-ಸೂರ್ಯ ಅಂತರ ಸಂಕೋಚಿಸುತ್ತಿರುವುದು. ಹೀಗಾಗಿ ಆಕಾಶದ ದೈನಂದಿನ ಆವರ್ತನೆಯಲ್ಲಿ ಚಂದ್ರನ ಹಿಂದೆ (ಪೂರ್ವಕ್ಕೆ) ಸೂರ್ಯನಿದ್ದು ಪಶ್ಚಿಮಾಭಿಮುಖಿಯಾಗಿ ಸರಿಯುತ್ತಿರುವ ದೃಶ್ಯ ಕಾಣುತ್ತದೆ.

* 14/15 ದಿವಸಗಳ ಈ 'ಕೃಷ್ಣಪಕ್ಷ' (ಚಂದ್ರಬಿಂಬ ಕ್ಷಯಿಸುತ್ತಿರುವ ಅವಧಿ) ಸಲ್ಲುವಾಗ ನಮಗೆ ಕಾಣುವಂತೆ ಚಂದ್ರ-ಸೂರ್ಯ ಒಂದೇ ದಿಶೆಯಲ್ಲಿದ್ದು ಚಂದ್ರನ ಉಜ್ಜ್ವಲಮುಖ ನಮ್ಮ ವಿರುದ್ಧ ದಿಶೆಗಿರುವುದು. ನಮಗೆ ಆಗ 'ಕಾಣುವುದು' ಚಂದ್ರನ 'ಬೆನ್ನು.' ಇದು ಬೆಳಗುವುದಿಲ್ಲ. ಆದ್ದರಿಂದ ಅಗೋಚರ. ಅಂದು ಅಮಾವಾಸ್ಯೆ.

ಎರಡೂ ಪಕ್ಷಗಳ ಒಟ್ಟು ಅವಧಿ ಸುಮಾರು 29.5 ದಿವಸಗಳು. ಎರಡು ಅನುಕ್ರಮ ಅಮಾವಾಸ್ಯೆಗಳ ನಡುವಿನ ಈ ಅವಧಿಗೆ 'ಚಾಂದ್ರಮಾಸ,' 'ತಿಂಗಳು' ಅಥವಾ 'ಸಂಯುತಿ ಮಾಸ' ಎಂದು ಹೆಸರು (ಚಂದ್ರ ಮತ್ತು ಸೂರ್ಯ ಒಂದೇ ದಿಶೆಯಲ್ಲಿ ಕಾಣುವ ಘಟನೆ 'ಸಂಯುತಿ'. ಇದು ಅಮಾವಾಸ್ಯೆ; ವಿರುದ್ಧ ದಿಶೆಗಳಲ್ಲಿ ಕಾಣುವ ಘಟನೆ 'ವಿಯುತಿ.' ಇದು ಹುಣ್ಣಿಮೆ.)

ಆದ್ದರಿಂದ ಚಂದ್ರನನ್ನು ಆಧರಿಸಿ ಕಾಲಮಾಪನೆ ಗೈಯುವಾಗ ಎರಡು ಬಗೆಯ ಮಾಸಗಳು ಮೈದಳೆಯುತ್ತವೆ : ನಿತ್ಯ ನಕ್ಷತ್ರಗಳಿಗೆ ಸಂಬಂಧಿಸಿದ ಸುಮಾರು 27 ದಿವಸಗಳ ನಾಕ್ಷತ್ರಿಕ ಮಾಸ; ಸೂರ್ಯನಿಗೆ ಸಂಬಂಧಿಸಿದ ಸುಮಾರು 29.5 ದಿವಸಗಳ ಸಂಯುತಿಮಾಸ (ಚಾಂದ್ರಮಾಸ).

ದಿವಸಗಳಿಗೆ ಹೆಸರಿಟ್ಟಾತ ಮಾನವ !

ಭಾನುವಾರ, ಸೋಮವಾರ, ಮಂಗಳವಾರ, ಬುಧವಾರ, ಗುರುವಾರ, ಶುಕ್ರವಾರ, ಶನಿವಾರ - ಈ ಏಳು ದಿವಸಗಳ ಸಮೂಹ ನಮಗೆ ಸುಪರಿಚಿತ. ಇದಕ್ಕೆ ಸಪ್ತಾಹ ಎಂದು ಹೆಸರು. ದಿವಸಗಳ ಹೆಸರು ಮಾನವ ಇಟ್ಟದ್ದು, ನಿಸರ್ಗ ಕೊಟ್ಟದ್ದು ಅಲ್ಲ. ಇಂದಿನ ಸೂರ್ಯೋದಯದಿಂದ ನಾಳಿನ ಸೂರ್ಯೋದಯದ ತನಕ ವ್ಯಾಪಿಸಿರುವ ಕಾಲಖಂಡ ಇಂತಹುದೇ ಇನ್ನೊಂದು ಕಾಲಖಂಡಕ್ಕಿಂತ ವಿಭಿನ್ನವೆಂದು ತೋರಿಸುವುದು ವ್ಯಾವಹಾರಿಕವಾಗಿ ಆವಶ್ಯಕ ಎನಿಸಿದುದರಿಂದ ಇವು ಬಳಕೆಗೆ ಬಂದವು. ಅಂದ ಮೇಲೆ ಈ ನಾಮಕರಣಕ್ಕೆ ಆಧಾರವಾಗಿ ಅಥವಾ ಪ್ರೇರಕವಾಗಿ ಏನಾದರೂ ನೈಸರ್ಗಿಕ ವಿದ್ಯಮಾನ ಇದೆಯೇ ? ಸಪ್ತಾಹ ಕುರಿತಂತೆ, ವಿಶಿಷ್ಟವಾಗಿ, ಈ ಮುಂದಿನ ನಾಲ್ಕು ಪ್ರಶ್ನೆಗಳು ಮೊಳೆಯುತ್ತವೆ:

1. ಸಪ್ತಾಹದಲ್ಲಿ 7 ವಾರ(ದಿವಸ)ಗಳೇ ಏಕೆ ? ಬೇರೆ ಯಾವ ಸಂಖ್ಯೆಯನ್ನೂ ಆಯದಿರುವುದರ ಕಾರಣವೇನು?

2. ವಾರ(ದಿವಸ)ಗಳ ಅನುಕ್ರಮ ಈಗ ಬಳಕೆಯಲ್ಲಿರುವಂತೆಯೇ, ಭಾನುವಾರದಿಂದ ಶನಿವಾರದ ವರೆಗಿನ ಚಕ್ರ, ಇರಬೇಕು ಏಕೆ ? ಉದಾಹರಣೆಗೆ, ಶನಿವಾರ - ಮಂಗಳವಾರ - ಭಾನುವಾರ-ಬುಧವಾರ-ಸೋಮವಾರ-ಶುಕ್ರವಾರ-ಗುರುವಾರ, ಇಂಥ ಸರಣಿ ಏಕೆ ಇರ ಬಾರದು ?

3. ಆಯಾ ವಾರ(ದಿವಸ)ನಾಮ ಸೂಚಿಸುವ 24 ಗಂಟೆಗಳ ಕಾಲ ಖಂಡಕ್ಕೂ ಆ

ವಾರದ ಹೆಸರಿಗೆ ಕಾರಣವಾದ ಆಕಾಶಕಾಯಕ್ಕೂ ನಡುವೆ ಏನಾದರೂ ತಾರ್ಕಿಕ ಅಥವಾ ಭೌತಿಕ ಸಂಬಂಧವಿದೆಯೇ ?

4. ವಾರ, ಗಂಟೆ ಮುಂತಾದ ಕಾಲಖಂಡಗಳನ್ನು ಶುಭ, ಅಶುಭ, ಮಿಶ್ರ ಎಂದು ಮುಂತಾಗಿ ವರ್ಗೀಕರಿಸುವುದು ಸಾಧುವೇ? ನಿಸರ್ಗಸಮ್ಮತವೇ?

ಕಾಲವನ್ನಾಗಲಿ ದೇಶ(ದೂರ)ವನ್ನಾಗಲಿ ಮಾನವ ಅಖಂಡವಾಗಿ, ಅಂದರೆ ಒಮ್ಮೆಗೇ, ಗ್ರಹಿಸಲಾರ. ಉದಾಹರಣೆಗೆ, "14 ವರ್ಷಗಳ ವನವಾಸವನ್ನು ಈ ಕ್ಷಣ ಅನುಭವಿಸು" ಎಂದು ಶ್ರೀರಾಮನಿಗೆ ವಿಧಿಸಿದರೆ, ಹಿಮಾಲಯವಾಸಿ ಅಗಸ್ತ್ಯ ಮುನಿಗೆ "ಈ ಕ್ಷಣವೇ ದಕ್ಷಿಣದ ಬ್ರಹ್ಮಗಿರಿಗೆ ನೆಗೆದು ಅಲ್ಲಿ ಆಶ್ರಮ ಸ್ಥಾಪಿಸು" ಎಂದು ಆಜ್ಞಾಪಿಸಿದರೆ, ಅಥವಾ "ಬಕಾಸುರನಿಗೆ ಗ್ರಾಸವಾಗಲಿರುವ ಈ ಬಂಡಿಗಾತ್ರದ ಕೂಳನ್ನು ಒಂದೇ ತುತ್ತಿಗೆ ನುಂಗು" ಎಂದು ಭೀಮನಿಗೆ ಅಪ್ಪಣೆ ಮಾಡಿದರೆ, ಸಂಬಂಧಿತ ಪುರುಷೋತ್ತಮರು ಎಂಥ ಮಹಿಮಾ ಸಂಪನ್ನರಾಗಿದ್ದರೂ, ಈ ಆದೇಶಗಳು ಮಾತ್ರ ಕಾರ್ಯಗತವಾಗವು. ವ್ಯಕ್ತಿ-ನಿಸರ್ಗ ಸಂಬಂಧದಲ್ಲಿ ವ್ಯಕ್ತಿಯ ಸೀಮಿತತೆಯೂ ನಿಸರ್ಗದ ಅಗಾಧತೆಯೂ ಇದರ ಕಾರಣಗಳು. ಅರ್ಥ: ಆಹಾರ ಒಂದನ್ನೇ ಅಲ್ಲ ಕಾಲ ಮತ್ತು ದೇಶಗಳನ್ನು ಕೂಡ ಮಾನವ ಅಖಂಡವಾಗಿ ಗ್ರಹಿಸಲಾರ, ಆದರೆ ಅನುಕೂಲ ಖಂಡ(ತುಣುಕು)ಗಳಾಗಿ ಖಾತ್ರಿ ಗ್ರಹಿಸಬಲ್ಲ ಮತ್ತು ತದನುಗುಣವಾಗಿ ವ್ಯವಹರಿಸಬಲ್ಲ.

ಕಾಲದ ಅಖಂಡ ಪ್ರವಾಹದಲ್ಲಿ ದಿವಸಖಂಡಗಳನ್ನು (ಅಂತೆಯೇ ಪಕ್ಷ ಹಾಗೂ ವರ್ಷಖಂಡಗಳನ್ನು ಕೂಡ) ನಿಸರ್ಗವೇ ನೀಡಿತು. ಪಕ್ಷವೆಂದರೆ 14 ದಿವಸಗಳ (ಅಮಾವಾಸ್ಯೆ-ಹುಣ್ಣಿಮೆ, ಹುಣ್ಣಿಮೆ-ಅಮಾವಾಸ್ಯೆ) ಘಟಕ. ಸಂಖ್ಯೆ 14ಕ್ಕೆ ಪ್ರಾಧಾನ್ಯ ಹೀಗೆ ಬಂದಿತು. ಇಂದಿನಂತೆ ಅಂದಿನ ಮಾನವನೂ ಆಕಾಶದಲ್ಲಿ 7 ಚರಕಾಯಗಳನ್ನು ಗುರುತಿಸಿದ : ಸೂರ್ಯ, ಚಂದ್ರ ಮಂಗಳ, ಬುಧ, ಗುರು, ಶುಕ್ರ ಮತ್ತು ಶನಿ. ಸಂಖ್ಯೆ 7ಕ್ಕೆ ಪ್ರಾಧಾನ್ಯ ಬಂದದ್ದು ಈ ಕಾರಣದಿಂದ. ಮುಂದಿನದು ? ನಿಮ್ಮ ಊಹೆ ಸರಿ : 14ರ ಅರ್ಧ 7.

ಪಕ್ಷಾರ್ಧವೇ ಸಪ್ತಾಹ! ಪಕ್ಷದ ದೀರ್ಘಾವಧಿಗಿಂತ ಸಪ್ತಾಹದ ಹ್ರಸ್ವಾವಧಿಯನ್ನು ಗ್ರಹಿಸುವುದು ಸುಲಭ. ಅಲ್ಲಿಗೆ ಆದಿಮಾವನ (ಆದಿನಾಗರಿಕ ಮಾನವನ) ಲಕ್ಷ್ಯ ಇತರ ಎಲ್ಲ ಸಂಖ್ಯೆಗಳಿಗಿಂತಲೂ ಮುಖ್ಯವಾಗಿ 7ರ ಸುತ್ತ ಸಾಂದ್ರೀಕರಿಸಿತು.

ವಿವಿಧ ಆದಿನಾಗರಿಕತೆಗಳು ವಿವಿಧ ರೀತಿಗಳಲ್ಲಿ ಈ 7 ಚರಕಾಯಗಳ ಚಲನೆಗಳನ್ನು ಶತಮಾನಪರ್ಯಂತ ದಾಖಲಿಸಿದ್ದುವು. ಈ ಅಂಕೆ ಸಂಖ್ಯೆಗಳ, ಅಂತೆಯೇ ಅಂತೆ ಕಂತೆಗಳ, ಬೊಂತೆಗಳಿಂದ ಚಿಕಿತ್ಸಕ ಮತ್ತು ವಿಮರ್ಶಕ ಮತಿಗಳು ಚರಕಾಯಗಳ ಪರಿಭ್ರಮಣಾವಧಿಗಳನ್ನು - ಅಂದರೆ ಚಂದ್ರನಿಗೆ ಮಾಸ ಇರುವಂತೆ ಅಥವಾ ಸೂರ್ಯನಿಗೆ ವರ್ಷ ಇರುವಂತೆ ಇತರ ಪ್ರತಿಯೊಂದು ಕಾಯಕ್ಕೂ ಭೂಮಿಯ ಸುತ್ತ ಒಂದು ಸುತ್ತು ಪೂರೈಸಲು ತಾಗುವ ಕಾಲ - ಗಣಿಸಿದುವು. ಇವು ಅಸಮವಾಗಿದ್ದುವು. ಯಾವುದರದು ಅತ್ಯಧಿಕ ? ಅತಿ ಕನಿಷ್ಠ? ಹೀಗೆ ವಿಶ್ಲೇಷಿಸಿದಾಗ ಹೊಸ ಹಾದಿ ಒದಗಿತು : 'ವರ್ಷ'ಗಳ ಅಂದರೆ ಪರಿಭ್ರಮಣಾವಧಿಗಳ ಅವರೋಹೀ (ಇಳಿಯುವ) ಕ್ರಮದಲ್ಲಿ 7 ಕಾಯಗಳ ಸರಣಿ ಇದು : ಶನಿ, ಗುರು, ಮಂಗಳ, ಸೂರ್ಯ, ಶುಕ್ರ, ಬುಧ, ಚಂದ್ರ. ಶನಿಯದು ಗರಿಷ್ಠಾವಧಿ, ಚಂದ್ರನದು ಕನಿಷ್ಠಾವಧಿ, ಉಳಿದವುಗಳ ಅವಧಿಗಳು ನಡುವಿನವು. ಭೂಮಿ ? ಇದು ಗಗಮಂಡಲ ಮಧ್ಯದಲ್ಲಿ ಸ್ಥಿರವಾಗಿ ನಿಂತಿದೆ ಎಂದು ಅಂದಿನವರ ನಂಬಿಕೆ. ಇಂದಾದರೂ ಭಾಸವಾಗುವುದು ಹೀಗೆಯೇ ಅಲ್ಲವೇ?

ಸೂರ್ಯೋದಯದಿಂದ ಮುಂದಿನ ಸೂರ್ಯೋದಯದ ತನಕ ಸಲ್ಲುವ ಅವಧಿಯನ್ನು (ದಿವಸ) 24 ಸಮಭಾಗಗಳಾಗಿ ವಿಭಾಗಿಸಲು ವರ್ಷದಲ್ಲಿರುವ ಪಕ್ಷಗಳ ಸಂಖ್ಯೆಯಿಂದ ಪ್ರೇರಣೆ ಒದಗಿತು : 1 ವರ್ಷದಲ್ಲಿ 12 ತಿಂಗಳುಗಳೂ 24 ಪಕ್ಷಗಳೂ ಇವೆ. ದಿವಸದ ಈ 24 ಖಂಡಗಳಿಗೆ ಗಂಟೆಗಳೆಂದು ಹೆಸರು. (ಭಾರತೀಯ ಕ್ರಮದಲ್ಲಿ ದಿವಸವನ್ನು 60 ಘಳಿಗೆಗಳಾಗಿ ವಿಭಾಗಿಸಿದೆ; ಆದ್ದರಿಂದ 1 ಗಂಟೆಗೆ 2.5 ಘಳಿಗೆಗಳು ಸಮ.)


ಇನ್ನು ದಿವಸನಾಮಕರಣ. ಅಗೋಚರ ದೇವರ ಗೋಚರ ನೇತ್ರಗಳೇ ಸೂರ್ಯಚಂದ್ರರೆಂದೂ ಉಳಿದ 5 ಚರಕಾಯಗಳು ಅದೇ ದೇವರ ವಿವಿಧ ಅವತಾರಗಳೆಂದೂ ಅಂದಿನ

ಚಿಂತನಶೀಲರು ಭಾವಿಸಿದರು. ಅಂದಮೇಲೆ ಈ ದೇವ ಪ್ರತಿನಿಧಿಗಳ ಹೆಸರುಗಳನ್ನು ಸಪ್ತಾಹದ 7 ದಿವಸಗಳಿಗೆ ಇಡುವುದು ಯೋಗ್ಯವಾಗಿದೆ. ಈ ನಾಮಕರಣಕ್ರಿಯೆಯಲ್ಲಿ ಅವರೊಂದು ಕ್ರಮ ಅನುಸರಿಸಿದರು :

ಇಂದಿನ ಸೂರ್ಯೋದಯದ ಗಂಟೆಯ ಅಧಿಪತಿಯಾಗಿ ಯಾರನ್ನು ಅಂಗೀಕರಿಸುತ್ತೇವೋ ಆತನ ಹೆಸರನ್ನೇ ಈ ಮುಂದಿನ 24 ಗಂಟೆಗಳ ದಿವಸಕ್ಕೆ ಇಡತಕ್ಕದ್ದು ; ಇಂದಿನ 2ನೆಯ, 3ನೆಯ, ಇತ್ಯಾದಿ, ಗಂಟೆಗಳ ಅಧಿಪತಿಗಳಾಗಿ ಉಳಿದ 6 ಕಾಯಗಳನ್ನು, ಈ ಮೇಲೆ ನೀಡಿರುವ ಯಾದಿಯ ಅನುಸಾರ, ನೇಮಿಸತಕ್ಕದ್ದು. ಉದಾಹರಣೆಗೆ, ಇಂದಿನ 1ನೆಯ ಗಂಟೆಯ ಅಧಿಪತಿ 'ಮಂಗಳ' ಆಗಿರಲಿ. ಆದ್ದರಿಂದ ಇಂದು ಮಂಗಳವಾರ :

ಮಂಗಳ	1	8	15	22
ಸೂರ್ಯ	2	9	16	23
ಶುಕ್ರ	3	10	17	24
ಬುಧ	4	11	18	25
ಚಂದ್ರ	5	12	19	
ಶನಿ	6	13	20	
ಗುರು	7	14	21	

ಸೋಮವಾರ	ಮಂಗಳವಾರ																								ಬುಧವಾರ
24	1	2	3	4	5	6	7	8	9	10	11	12	13	14	15	16	17	18	19	20	21	22	23	24	25
ಗುರು	ಮಂಗಳ	ಸೂರ್ಯ	ಶುಕ್ರ	ಬುಧ	ಚಂದ್ರ	ಶನಿ	ಗುರು	ಮಂಗಳ	ಸೂರ್ಯ	ಶುಕ್ರ	ಬುಧ	ಚಂದ್ರ	ಶನಿ	ಗುರು	ಮಂಗಳ	ಸೂರ್ಯ	ಶುಕ್ರ	ಬುಧ	ಚಂದ್ರ	ಶನಿ	ಗುರು	ಮಂಗಳ	ಸೂರ್ಯ	ಶುಕ್ರ	ಬುಧ



ಸೋಮವಾರ - ಮಂಗಳವಾರ - ಬುಧವಾರ ಮುಂತಾಗಿ ಸಪ್ತಾಹದಲ್ಲಿ ದಿವಸಗಳ
ಕ್ರಮಬದ್ಧ ಮುನ್ನಡೆಯನ್ನು ಸೂತ್ರೀಕರಿಸಿರುವ ಚಿತ್ರಗಳು.

ಇಂದಿನ 24ನೆಯ ಗಂಟೆಯ ಅಧಿಪತಿ ಶುಕ್ರ, 25ನೆಯದರದು ಬುಧ. ಈಗ, ದಿವಸದಲ್ಲಿ 24 ಗಂಟೆಗಳಿರುವುದರಿಂದ, ಇಂದಿನ 25ನೆಯ ಗಂಟೆ ಎಂದರೆ ನಾಳಿನ 1ನೆಯ ಗಂಟೆ ಎಂದರ್ಥ. ನಾಳಿನ 1ನೆಯ ಗಂಟೆಯ ಅಧಿಪತಿ ಬುಧ. ಆದ್ದರಿಂದ ನಾಳೆ ಬುಧವಾರ. ಹೀಗೆಯೇ ಮುಂದುವರಿದರೆ, ಬುಧವಾರದ 25ನೆಯ ಗಂಟೆಯ ಅಧಿಪತಿ ಗುರು ಎಂದು ತಿಳಿಯುತ್ತೇವೆ. ಆದ್ದರಿಂದ ಬುಧವಾರದ ಮರುದಿವಸ ಗುರುವಾರ. ಈ ಚಕ್ರ ಮುಂದೆ ಶುಕ್ರವಾರ, ಶನಿವಾರ, ಭಾನುವಾರ, ಸೋಮವಾರ ಧಾಟಿಯಲ್ಲಿ ಮುಂದುರುಳಿ ಮತ್ತೆ ಮಂಗಳವಾರಕ್ಕೆ ಬರುತ್ತದೆ.

ಅಂದರೇನಾಯಿತು ? ಆಕಾಶಕಾಯ-ದಿವಸಸಂಬಂಧ, ನಾವು ನಮ್ಮ ಸೌಕರ್ಯಾರ್ಥ ಮಾಡಿಕೊಂಡಿರುವ ಒಂದು ಏರ್ಪಾಡು, ಕಾಲಕ್ಕೆ ತೊಡಿಸಿರುವ ಉಡುಪು. ಉಡುಪಿಗೆ ಹೇಗೊ ದಿವಸನಾಮಗಳಿಗೆ ಹಾಗೆ ಯಾವ ವೈಯಕ್ತಿಕ ಗುಣವೂ ಇಲ್ಲ. ಮಾನವಮೂಲವಾದ ರಾಗ ಭಾವಗಳು ನಿಸರ್ಗಕ್ಕೆ ಅನ್ವಯವಾಗವು : "ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ."

ಮೊದಲು ಎತ್ತಿದ ನಾಲ್ಕು ಪ್ರಶ್ನೆಗಳಿಗೆ (**ಪುಟ 26-27**) ಈಗ ನೀವೇ ಉತ್ತರ ಬರೆಯಬಲ್ಲಿರಿ :

1. ತಾತ್ತ್ವಿಕವಾಗಿ ನಮಗೆ ಇಷ್ಟ ಬಂದಷ್ಟು ದಿವಸಗಳ ಗುಂಪನ್ನು 'ವಾರ'ವೆಂದು ಪರಿಗಣಿಸಬಹುದು. ಉದಾಹರಣೆಗೆ ವೇದ ಕಾಲದಲ್ಲಿ 'ಪಾಕ್ಷಿಕವಾರ'ವೂ (ಶುಕ್ಲಪಕ್ಷ, ಕೃಷ್ಣಪಕ್ಷ) ಪ್ರಾಚೀನ ಚೀನಾದೇಶದಲ್ಲಿ 'ಪಾಂಚಮಿಕವಾರ'ವೂ (ಐದು ದಿವಸಗಳ ಗುಂಪು) ಪ್ರಾಚೀನ ಈಜಿಪ್ಟ್ ದೇಶದಲ್ಲಿ 'ದಾಶಮಿಕವಾರ'ವೂ (ಹತ್ತು ದಿವಸಗಳ ಗುಂಪು) ಪ್ರಚಲಿತವಾಗಿದ್ದುವು. ಏಳು ದಿವಸಗಳ ಗುಂಪು, ಅಂದರೆ ಸಪ್ತಾಹ, ಪಾಂಚಮಿಕ ವಾರದ ಅತಿ ಹ್ರಸ್ವತೆಗೂ ಪಾಕ್ಷಿಕ ವಾರದ ಅತಿ ದೀರ್ಘತೆಗೂ ನಡುವೆ ಇರುವುದರ ಜೊತೆಗೆ 'ಗಗನ ಕೃಪಾಪೋಷಿತ'ವಾಗಿಯೂ ಇದ್ದು ನಮಗೆ ಉಸಿರಾಟದಷ್ಟೇ ಸುಲಭವಾಗಿ ಒಗ್ಗಿಹೋಗಿದೆ. ಇದು ನಮ್ಮ ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಎರಕಗೊಂಡಿದೆ. ಮುಖ್ಯವಾಗಿ ಅನುಕೂಲತೆ ಮತ್ತು ಉಪಯುಕ್ತತೆ ಉಂಟು.

2. ಏಳು ವಸ್ತುಗಳನ್ನು ಅಥವಾ ಬಿಂದುಗಳನ್ನು ವೃತ್ತದ ಸುತ್ತ 6 x 5 x 4 x 3 x 2 x 1 = 720 ವಿವಿಧ ರೀತಿಗಳಲ್ಲಿ ಅಳವಡಿಸುವುದು ಸಾಧ್ಯವಿದೆ. ಆದರೆ ಈಗ ವ್ಯವಹಾರದಲ್ಲಿರುವ ಸರಣಿಯಲ್ಲಿ ಅಂತರ್ಗತವಾಗಿರುವ ತಾರ್ಕಿಕತೆ ಮತ್ತು ಸೌಂದರ್ಯ ಉಳಿದ 719 ರೀತಿಗಳಿಗೆ ಲಬ್ಧವಾಗವು. ಕ್ರಿಸ್ತಪೂರ್ವ ಸುಮಾರು 8ರಿಂದ 7ನೆಯ ಶತಮಾನಗಳಲ್ಲಿ ಬಾಳಿದ್ದ, ಮತ್ತು ಗಗನ-ಭೂಮಿ ನಿಕಟತೆಗಳ ಬಗ್ಗೆ ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದ, ಕಾಲ್ಡೀಯನ್ (ಬ್ಯಾಬಿಲೋನಿಯಾ) ಖಗೋಳಪಂಡಿತರು ಈ ಕ್ರಮವನ್ನು ಬಳಕೆಗೆ ತಂದರು. ಇಂದು ಸಪ್ತಾಹ, ವೈದಿಕ ಕ್ರಿಯೆಗಳನ್ನೂ ಒಳಗೊಂಡಂತೆ, ಪ್ರಪಂಚಾದ್ಯಂತ, ಜನಜೀವನದ ಅವಿಭಾಜ್ಯ ಅಂಗವಾಗಿದೆ.

3. ಏನೂ ಇಲ್ಲ. ಸುತರಾಂ ಇಲ್ಲ. ಖಾತ್ರಿ ಇಲ್ಲ. "ಇಂದು ಮಂಗಳವಾರ" ಎನ್ನುವಾಗ ಮಂಗಳ ಗ್ರಹಕ್ಕೂ ಇಂದಿನ ಅವಧಿಗೂ ನಡುವೆ ಯಾವುದೇ ನೈಸರ್ಗಿಕ ಸಂಬಂಧ ಗುರುತಿಸಲಾಗುವುದಿಲ್ಲ. ಏಕೆಂದರೆ ಅಂಥ ಸಂಬಂಧ ಇಲ್ಲ, ಅದು ಪೂರ್ತಿ ಮಾನವಕಲ್ಪಿತ.


"ಈಗ ಹಗಲು" ಎಂದಾಗ ನೇಸರಿನ ಇರವನ್ನು ಬಾನಿನಲ್ಲಿ ನೋಡಬಹುದು, "ಇಂದು ಚಂದ್ರ ಗ್ರಹಣ" ಎಂದಾಗ ಹುಣ್ಣಿಮೆ ರಾತ್ರಿ, ಚಂದ್ರಬಿಂಬ ಭೂಛಾಯೆಯಿಂದ ತುಸುಕಾಲ ಮರೆಯಾಗುವುದನ್ನು ಕಾಣಬಹುದು. ಹಗಲು, ಇರುಳು, ಗ್ರಹಣ, ಸಂಕ್ರಮಣ, ಉತ್ತರಾಯಣ ಕಾಲ ಮುಂತಾದವು ನೈಸರ್ಗಿಕ ಘಟನೆಗಳಿಗೆ ನಾವು ನೀಡಿರುವ ನಾಮಗಳು. ಶನಿವಾರ, ಜನವರಿ, ಇಸವಿ 1995, ಮೇಲೆ, ಕೆಳಗೆ ಮುಂತಾದವು ನೈಸರ್ಗಿಕ ಘಟನೆಗಳ ಪ್ರತಿಬಿಂಬಗಳಲ್ಲ. ವ್ಯಾವಹಾರಿಕ ಸೌಕರ್ಯಾರ್ಥ ನಾವು ರೂಪಿಸಿ ಹೆಸರಿಸಿರುವ ಪರಿಕಲ್ಪನೆಗಳು.

3. ಕಾಲ ಮತ್ತು ದೇಶ ಎಂಬವು ನಿರ್ಜೀವ ಪದಾರ್ಥಗಳು ಅಥವಾ ಅನುಭವಗಳು. ಕೇವಲ ಮಾನವಗುಣಗಳಾದ ಪ್ರೀತಿ-ದ್ವೇಷ, ಕರುಣೆ-ಕ್ರೌರ್ಯ, ಔದಾರ್ಯ-ಮಾತ್ಸರ್ಯ, ಸ್ವಾಸ್ಥ್ಯ-ಆತಂಕ, ಉಲ್ಲಾಸ-ಖೇದ ಮುಂತಾದವು ಇವುಗಳಿಗಿಲ್ಲ. ಸುಕಾಲ-ಕುಕಾಲ, ಸುಮುಹೂರ್ತ-ದುರ್ಮುಹೂರ್ತ, ಅಮೃತಘಳಿಗೆ-ವಿಷಘಳಿಗೆ, ಅನುಕೂಲಕಾಲ-ರಾಹುಕಾಲ ಮುಂತಾದವು ನಮ್ಮ ಕಲ್ಪನೆಗಳು ಮಾತ್ರ. ನಿಸರ್ಗದಲ್ಲಿ ಇವುಗಳಿಗೆ ಅಸ್ತಿತ್ವವಿಲ್ಲ, ಆಧಾರವಿಲ್ಲ. ಆತ್ಮಭರವಸೆ ಇರುವವರಿಗೆ ಎಲ್ಲ ಕಾಲವೂ ಶುಭಕಾಲವೇ. ಇಲ್ಲದವರಿಗೆ ? ಸದಾ ಗಂಡಾಂತರ! ಇದರ ಕಾರಣವರಿಯಲು ಆತ್ಮನಿರೀಕ್ಷೆ ವಿಮರ್ಶೆ ಚಿಂತನೆ ಮಾಡಬೇಕೇ ವಿನಾ ಪಂಚಾಂಗ ಶ್ರವಣ, ಫಲಜ್ಯೋತಿಷಿ ನಮನ, ಹೋಮಹವನ ಮುಂತಾದ ಕೃತಕ ಮತ್ತು ವ್ಯರ್ಥ ವಿಧಾನಗಳಿಗೆ ಶರಣಾಗುವುದಲ್ಲ.

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ!

ಪಂಚಾಂಗದ ಅಂತರಂಗ ಅರಿಯೋಣ !

ಈಗ ನೀವು ಪಂಚಾಂಗ ಓದಲು ಮತ್ತು ಕೇಳಲು ಸಿದ್ಧರಾಗಿರುವಿರಿ (ಪುಟ9).





ಮೇಲಿನದು : 1-1-1995 ರಿಂದ 31-12-1995ರ ತನಕ ಸಲ್ಲುವ ಅವಧಿ 1995ನ್ನು ಪ್ರತೀಕಿಸುತ್ತದೆ.

ಕೆಳಗಿನದು : ಕ್ರಿಸ್ತಪೂರ್ವ 3ನೆಯ, 2ನೆಯ ಮತ್ತು 1ನೆಯ ಶತಮಾನಗಳ ಮುನ್ನಡೆ ಗಮನಿಸಿ.
ಕ್ರಿ. ಪೂ. 1ನೆಯ ಶತಮಾನ ಮುಗಿದ ಕ್ಷಣ (ಅಂದರೆ 31-12- ಕ್ರಿ. ಪೂ. 99 ಮುಗಿದಾಗ)
ಕ್ರಿ.ಶ. 1ನೆಯ ಶತಮಾನ (ಅಂದರೆ 1-1- ಕ್ರಿ.ಶ 1) ಆರಂಭವಾಗುತ್ತದೆ.

ಪುಟ 10ರಲ್ಲಿಯ ಚಿತ್ರದಲ್ಲಿ 'ಗಶಾ ಶಕವರ್ಷ ೧೯೧೭,' 'ಇಸವಿ 1995-96' ಮುಂತಾದ ಸಂಖ್ಯೆಗಳು ಅಥವಾ ಮಾನಕಗಳು. ಕಾಲ ಪ್ರವಾಹವನ್ನು ಆರಂಭ-ಅಂತ್ಯ ಇರದ ಸರಳರೇಖೆ ಎಂದು ಭಾವಿಸಿ, ಇದರ ಮೇಲೆ ಸಮ ಅಂತರಗಳಲ್ಲಿ ಕಚ್ಚುಗಳನ್ನು ಗುರುತಿಸಿಬೇಕು. ಅಕ್ಕಪಕ್ಕದ ಎರಡು ಕಚ್ಚುಗಳ ನಡುವಿನ ಅಂತರ 1 ವರ್ಷವನ್ನು ಸೂಚಿಸುವುದೆಂದು ಭಾವಿಸೋಣ. ವರ್ತಮಾನ ವರ್ಷವನ್ನು (1995) ನಮಗೆ ಅನುಕೂಲವಾದೆಡೆ ಗುರುತಿಸೋಣ. ಈಗ ಪುಟ 33ರಲ್ಲಿಯ ಚಿತ್ರವನ್ನು ಎಚ್ಚರಿಕೆಯಿಂದ ನೋಡಿ. ಇಸವಿ 1995ರ ಎಡಕ್ಕೆ ಭೂತ ಚಾಚಿದೆ, ಬಲಕ್ಕೆ ಭವಿಷ್ಯ ಹಬ್ಬಿದೆ. ಹಾಗಾದರೆ ಕ್ರಿಸ್ತಶಕ ಅಥವಾ ಇಸವಿ 1995 ಏನನ್ನು ಸೂಚಿಸುತ್ತದೆ ? ಕಾಲರೇಖೆಯ ಭೂತಖಂಡದಲ್ಲಿ ಹಿಂದೆ ಹಿಂದೆ ಸರಿದು ಕ್ರಿಸ್ತಶಕ ಅಥವಾ ಇಸವಿ 1ನ್ನು ತಲಪಬೇಕು. ಕ್ರಿಸ್ತಶಕದ ಆರಂಭಬಿಂದು ಅದು, ಕಾಲದ ಆರಂಭ ಬಿಂದು ಅಲ್ಲ! ಏಕೆಂದರೆ ಅದಕ್ಕಿಂತಲೂ ಹಿಂದಕ್ಕೆ ಅಖಂಡವಾಗಿ ಕಾಲರೇಖೆ ಚಾಚಿದೆ. ಈ ಭೂತವಿಸ್ತೃತ ಕಾಲರೇಖೆಗೆ ಕ್ರಿಸ್ತಪೂರ್ವ ಎನ್ನುತ್ತೇವೆ. (ಕ್ರಿಸ್ತಶಕ 0 ಎಂಬುದು ಇಲ್ಲ; ಕ್ರಿಸ್ತಪೂರ್ವ 2ರಿಂದ 1ರ ತನಕ ಕ್ರಿ. ಪೂ. 1ನೆಯ ಇಸವಿ, ಕ್ರಿ. ಪೂ. 1ರಿಂದ ಕ್ರಿ. ಶ. 1ರ ತನಕ ಕ್ರಿ. ಶ. 1ನೆಯ ಇಸವಿ, ಕ್ರಿ. ಶ. 1 ರಿಂದ 2ರ ತನಕ ಇಸವಿ 2, ಹೀಗೆಯೇ ಮುನ್ನಡೆದರೆ ಕ್ರಿ. ಶ. 1994ರಿಂದ 1995ರ ತನಕ 1995ನೆಯ ಇಸವಿ ದೊರೆಯುತ್ತವೆ. 31-12-1995ರ ಮಧ್ಯರಾತ್ರಿಗೆ 1995ನೆಯ ಇಸವಿ ಮುಗಿಯುತ್ತದೆ.)

ಆದ್ದರಿಂದ ಶಕದ ಹೆಸರು ಏನೇ ಇದ್ದರೂ ಇದಕ್ಕೊಂದು ಆರಂಭವಿದೆ. ಅಲ್ಲಿಂದ ತೊಡಗಿ ವರ್ತಮಾನಕ್ಕೆ ಬರಲು ಎಷ್ಟು ವರ್ಷ (ಕಚ್ಚು) ದಾಟಬೇಕು ಎಂಬುದನ್ನು ಶಕದ ಒತ್ತಿಗಿರುವ ಸಂಖ್ಯೆ ಸೂಚಿಸುತ್ತದೆ. ಇಲ್ಲಿ ಒಂದು ಸೂಕ್ಷ್ಮ ಗಮನಿಸಬೇಕು. ಗತ ಶಾಲಿವಾಹನ ಶಕ ವರ್ಷ 1917 ಎನ್ನುವಾಗ ಇಂದು ನಾವು 1917 ದಾಟಿ 1918ರಲ್ಲಿ ಇದ್ದೇವೆಂದು ಅರ್ಥ. ಇಸವಿ 1995 ಎನ್ನುವಾಗ 1995ರಲ್ಲಿದ್ದೇವೆ, 31-12-1995ರ ಮಧ್ಯರಾತ್ರಿಗೆ ಇದು ಮುಗಿಯಲಿದೆ ಎಂದರ್ಥ. ಈ ಲೇಖನವನ್ನು ದಿನಾಂಕ 3-3-1995ರಂದು ಬರೆಯುತ್ತಿದ್ದೇನೆ : ಇಂದು ಮಧ್ಯರಾತ್ರಿಗೆ ದಿನಾಂಕ 3 ಮುಗಿಯಲಿದೆ, ಮಾರ್ಚ್ 31ರ ಮಧ್ಯರಾತ್ರಿಗೆ ತಿಂಗಳು

3 ಮುಗಿಯಲಿದೆ. ಮತ್ತು ಡಿಸೆಂಬರ್ 31ರ ಮಧ್ಯರಾತ್ರಿಗೆ 1995ನೆಯ ಇಸವಿ ಮುಗಿಯಲಿದೆ ಇಷ್ಟು ಭಾವನೆ ಈ ವಾಕ್ಯದಲ್ಲಿ ಗರ್ಭಿತವಾಗಿದೆ.

ಶಕಾರಂಭ ಎಂದು ? ತಾತ್ವಿಕವಾಗಿ, ಯಾವಾಗ ಬೇಕಾದರೂ ಶಕವನ್ನು ಆರಂಭಿಸಬಹುದು. ಉದಾಹರಣೆಗೆ ಸ್ವತಂತ್ರ, ಭಾರತ ಶಕವರ್ಷವನ್ನು 15-8-1947ರಿಂದ ರಾಜಕೀಯವಾಗಿ ತೊಡಗಬಹುದು. ಆದರೆ ವ್ಯಾವಹಾರಿಕವಾಗಿ ಇದು ಉಪಯುಕ್ತವಾಗದು.

ಭಾರತೀಯಸಂವತ್ಸರಗಳಿಗೆ ಪ್ರಭವದಿಂದ ತೊಡಗಿ ಕ್ಷಯದ ವರೆಗೆ ೬೦ ವಿವಿಧ ಹೆಸರುಗಳಿವೆ. ಇವು ಚಾಂದ್ರವರ್ಷವನ್ನು ಆಧರಿಸಿವೆ :

೨೨-೩-೧೯೮೫ ರಿಂದ	೯-೪-೧೯೮೬	...	ಕ್ರೋಧನ ಸಂವತ್ಸರ
೧೦-೪-೧೯೮೬ ರಿಂದ	೨೯-೩-೧೯೮೭	...	ಕ್ಷಯ ಸಂವತ್ಸರ
೩೦-೩-೧೯೮೭ ರಿಂದ	೧೭-೩-೧೯೮೮	...	ಪ್ರಭವ ಸಂವತ್ಸರ
೧೮-೩-೧೯೮೮ ರಿಂದ	೫-೪-೧೯೮೯	...	ವಿಭವ ಸಂವತ್ಸರ
೬-೪-೧೯೮೯ ರಿಂದ	೨೬ -೩-೧೯೯೦	...	ಶುಕ್ಲ ಸಂವತ್ಸರ
೨೭-೩-೧೯೯೦ ರಿಂದ	೧೬-೩-೧೯೯೧	...	ಪ್ರಮೋದ ಸಂವತ್ಸರ
೧೭-೩-೧೯೯೧ ರಿಂದ	೩-೪-೧೯೯೨	...	ಪ್ರಜಾಪತಿ ಸಂವತ್ಸರ
೪-೪-೧೯೯೨ ರಿಂದ	೨೩-೩-೧೯೯೩	...	ಆಂಗೀರಸಸಂವತ್ಸರ
೨೪-೩-೧೯೯೩ ರಿಂದ	೧೦-೪-೧೯೯೪	...	ಶ್ರೀಮುಖ ಸಂವತ್ಸರ
೧೧-೪-೧೯೯೪ ರಿಂದ	೩೧ -೩-೧೯೯೫	...	ಭಾವ ಸಂವತ್ಸರ
೧-೪-೧೯೯೫ ರಿಂದ	೧೯-೩-೧೯೯೬	...	ಯುವ ಸಂವತ್ಸರ, ಇತ್ಯಾದಿ

ಸಂವತ್ಸರ ಅವಧಿಗಳಾಗಲಿ ನಾಮಗಳಾಗಲಿ ಸ್ವತಃ ಶುಭಾಶುಭಗಳನ್ನು ಖಂಡಿತ ಒಳಗೊಂಡಿಲ್ಲ. ರಾಮ ಎನ್ನುವ ಹೆಸರಿನ ವ್ಯಕ್ತಿ ಅತ್ಯಂತ ದುಷ್ಟನಾಗಿದ್ದರೆ, ಅದೇ ರೀತಿ ರಾವಣ ಎನ್ನುವ ಹೆಸರಿನ ಇನ್ನೊಬ್ಬ ವ್ಯಕ್ತಿ ಪರಮ ಧರ್ಮಿಷ್ಠನಾಗಿದ್ದರೆ ಇವರ ಆ ಗುಣಾವಗುಣಗಳ ಕಾರಣಗಳನ್ನು ಹೆಸರುಗಳಲ್ಲಿ ಹುಡುಕಲು ಪ್ರಯತ್ನಿಸುವುದು ಎಷ್ಟು ಹಾಸ್ಯಾಸ್ಪದವೋ ಅತಾರ್ಕಿಕವೋ ಅಷ್ಟೇ ಈ ಸಂವತ್ಸರಗಳಲ್ಲಿ ಕೂಡ. ಆದ್ದರಿಂದ ಕ್ಷಯ ಸಂವತ್ಸರ ವಿನಾಶಕರವಾಗಿರಬೇಕಾಗಿಲ್ಲ, ಯುವ ಸಂವತ್ಸರ ಯೌವನಸಂಪನ್ನವಾಗಿರಬೇಕಾಗಿಯೂ ಇಲ್ಲ. ಕಾಲ ನಮ್ಮ ಇಷ್ಟಾನಿಷ್ಟಬಂಧಿತವಲ್ಲ, ಬಾಧಿತವೂ ಅಲ್ಲ. ಕಾಲದ ಸದ್ವಿನಿಯೋಗ ಅಥವಾ ದುರ್ವ್ಯಯ ನಮ್ಮ ಕೈಯ್ಯಲ್ಲಿದೆ. ನಾವೇ ನಮ್ಮ ಕಾಲನಾಯಕರು.

ಓದೋಣ ಬನ್ನಿ ಪಂಚಾಂಗ !

ಪುಟ 37 ಮತ್ತು 38ರಲ್ಲಿಯ ಚಿತ್ರಗಳಲ್ಲಿ ಪಂಚಾಂಗದ ಎರಡು ಅಕ್ಕ ಪಕ್ಕದ ಪುಟಗಳನ್ನು ಕಾಣಿಸಿದೆ. ಪ್ರತಿಯೊಂದರಲ್ಲಿಯೂ ಪಾಠಭಾಗದ ಮೇಲು ಸಾಲಿನಲ್ಲಿ ಒಂದೇ ಮಾಹಿತಿ ಅಥವಾ ಸೂಚ್ಯಕ್ಷರಗಳು ಪುನರಾವರ್ತಿಸುತ್ತಿವೆ. ವಿವರಗಳನ್ನು ಗಮನಿಸೋಣ.

ರಾದಿ : ರಾಷ್ಟ್ರೀಯ ದಿನಾಂಕ. ಭಾರತದಲ್ಲಿ ಪ್ರಚಲಿತವಾಗಿದ್ದ ಅಸಂಖ್ಯ ಪಂಚಾಂಗಗಳನ್ನು ಶಿಷ್ಟೀಕರಿಸಿ ಭಾರತ ಸರ್ಕಾರ ಇಸವಿ 1956ರಲ್ಲಿ ರಾಷ್ಟ್ರೀಯ ಪಂಚಾಂಗವನ್ನು ಬಳಕೆಗೆ ತಂದಿತು. ರಾಷ್ಟ್ರೀಯ ಮಾಸ, ರಾಷ್ಟ್ರೀಯ ದಿನಾಂಕ ಎಂಬವು ಈ ಆಧುನಿಕ, ವೈಜ್ಞಾನಿಕ, ಜೊತೆಯಲ್ಲೇ ಧಾರ್ಮಿಕ ಪಂಚಾಂಗದ ಪ್ರಕಾರ ಮಾಡಿರುವ ಗಣನೆಗಳು. ಇವು ನೈಸರ್ಗಿಕ ವಿದ್ಯಮಾನಗಳ ಜೊತೆ ಬೆಸುಗೆಗೊಂಡಿವೆ, ಪರಂಪರಾಗತ ಧಾರ್ಮಿಕ ಆಚರಣೆಗಳ ಮೂಲ ಅರ್ಥ ಗ್ರಹಿಸಿ ಅವನ್ನು ಈ ದಿನಗಳೊಂದಿಗೆ ಯುಕ್ತವಾಗಿ ಹೊಂದಿಸಿವೆ. ಯುಗಾದಿ ಎಂದು? ವಸಂತ ವಿಷುವದಂದು, ಮಾರ್ಚ್ ೨೨. ನರಕಚತುರ್ದಶಿ (ದೀಪಾವಳಿ) ಎಂದು ? 23-10-1995ರಂದು, ಇತ್ಯಾದಿ. ಪರಂಪರೆಯ ಸತ್ತ್ವ ಉಳಿಸಿಕೊಂಡು ವರ್ತಮಾನ ಗಗನವಾಸ್ತವತೆಗೆ ವೈಜ್ಞಾನಿಕವಾಗಿ ಸ್ಪಂದಿಸಿರುವ ಪಂಚಾಂಗವೇ ರಾಷ್ಟ್ರೀಯ ಪಂಚಾಂಗ. ಪ್ರತಿ

ಪುಷ್ಪ ಕಾಣಬಹುದು. ಆದರೆ ನಮ್ಮ ಪ್ರಾಂತ್ಯದಲ್ಲಿ ಆಗ ಮಳೆಗಾಲವಾಗುವುದರಿಂದ ಉತ್ತರಾಯಣಾರಂಭ ಕಾಲವನ್ನು ಪರೀಕ್ಷಿಸುವುದೇ ನಮಗೆ ಸುಲಭವಾಗುವುದು. ತೈತ್ತಿರೀಯ ಬ್ರಾಹ್ಮಣದಲ್ಲಿ

ರಾಷ್ಟ್ರೀಯ ಮಾಸ ಭಾದ್ರ		1995 ಸಪ್ಟೆಂಬರ ಸಿಂಹ		ಶಕಃ ೧೯೧೭ **ಯುವ ಸಂವತ್ಸರಃ ಭಾದ್ರಪದ ಕೃಷ್ಣಪಕ್ಷಃ ವರ್ಷಋತುಃ ದಕ್ಷಿಣಾಯನಂ**	ಉದಯ ಘಂ. 6-20 ಅಸ್ತ ಘಂ. 6-33 ದಿವಾಮಾನಘ. ೩೦೫೨
	ರಾದಿ	ತಾ.	ದಿನ	ತಿಥಿ, ವಾರ, ನಕ್ಷತ್ರ, ಯೋಗ, ಕರಣ, ವಿಷ, ಅಮೃತ	
	೧೯	10	೨೪	೧ ರ೩॥ ಉತ್ತ೫॥ ಶೂ೧೧ ಕೌ೩॥ ವಿ೧೯॥ ಅ೪೩॥ ಪೂಳರ೧೫॥ ಪಳಬು೬ **ಪಿತೃಪಕ್ಷಃ ಕ್ಷಮಾವಾಣೀ** (ಜೈನ್) ವೃ.ಪ್ರ.೪೮	
	೨೦	11	೨೫	೨ ಚಂ೨ ರೇ೫೬ ಗಂ೬ ಗ೨ ವಿ೨೬। ಅ೫೧ ಮೇಷೇ೫೬ ಕನ್ಯಾಶುಕ್ರಃ ವೃ.ನಿ.೧೦	
	೨೧	12	೨೬	೩ ಕು೨ ಅ೬೦ ವೃ೪॥ ಭ೨ ವಿ೪೯॥ ಅ೪೧। ಸ್ವಾ೨ಬು೫೬ **ಸಂಕಷ್ಟಚತುರ್ಥೀ** ಚಂ.ಉ. ಘಂ. 9-30	
	೨೨	13	೨೭	೪ ಬು೪ ಅ೦೮೦ ಧ್ರು೩। ಬಾ೪ ವಿ೨೬। ಅ೫೨। **ಉತ್ತರಾರ್ಕ೯೪೧॥** ಉತ್ತ೩ಬು೫೧ **ಭರಣೀಶ್ರಾದ್ಧಂ**	
	೨೩	14	೨೮	೫ ಗು೬। ಭ೫। ವ್ಯಾ೩॥ ತೈ೬। ವಿ೩೮। ಅ೦ ವೃಷೇ೨೧॥ ಚಿ೧ಬು೧೩	
	೨೪	15	೨೯	೬ ಶು೧೨ ಕೃ೧೧॥ ಹ೮೪॥ ವ೧೨ ವಿ೫೬। ಅ೪॥ ಪೂರ್ವೇದ್ಯುಃ **ಚಂದನಷಷ್ಠೀವ್ರತಂ** (ಜೈನ್)	
	೨೫	16	೩೦	೭ ಶ೧೮ ರೋ೧೮॥ ವ್ರ೬॥ ಬ೧೮ ವಿ.ಶೇ.॥ಕಿ೩೪। ಅ೯॥ ಮಿಥುನೇ೫೨। ಉತ್ತ೪ಬು೩೨ ಅಷ್ಟಕಾ	
	೨೬	17	೩೧	೮ ರ೨೪ ಮೃ೨೬ ಸಿ೯ ಕೌ೨೪ ವಿ೩೮। ಅ೧। ಉತ್ತ೨ರ **ಕನ್ಯಾಸಂಕ್ರಮಃ೬** ಸ್ವಾ೩ಬು೫೫ ಅನ್ವಷ್ಟಕಾ **ವಿಶ್ವಕರ್ಮಪೂಜಾ**	
	೨೭	18	೧	೯ ಚ೨೯॥ ಆರ್೩೩ ವ್ಯ೧೧ ಗ೨೯॥ ವಿಂ ಅ೫	
	೨೮	19	೨	೧೦ ಕು೩೫ ಪು೩೯॥ ವ೧೨॥ ವ೨॥ ವಿ೬। ಅ೩೨॥ ಕರ್ಕಟೇ೨೩ ಹ೧ಬು೧೩	
	೨೯	20	೩	೧೧ ಬು೩೮॥ ಪು೪೪॥ ಪ೧೩॥ ಬ೬ ವಿ೧। ಅ೨೭। ಉತ್ತ೩ರ೩೨॥ **ಸರ್ವೈಕಾದಶೀ**	
	೩೦	21	೪	೧೨ ಗು೪೧। ಆ೪೮॥ ಶಿ೧೩॥ ಕೌ೧೦ ವಿ೧೯ ಅ೪೪॥ ಸಿಂಹೇ೪೮॥ ಹ೨ಬು೪ **ಸನ್ಯಾಸಿಮಹಾಲಯಃ**	
	೩೧	22	೫	೧೩ ಶು೪೨। ಮ೫೧ ಸಿ೧೨। ಗ೧೧॥ ವಿ೨೦ ಅ೪೫ ಸ್ವಾ೪ಬು೪೯ ವಕ್ರೀಬುಧಃ ಪ್ರೂ೨ವ.ಶ೩೧೦ **ಪ್ರದೋಷಃ** ಮಾಸಶಿವರಾತ್ರಿ **ಕಲಿಯುಗಾದಿಃ**	
	೧	23	೬	೧೪ ಶ೪೨ ಪೂ೫೬ ಸಾ೧೦ ಭ೧೨ ವಿ೧೧॥ ಅ೩೫॥ ಉತ್ತ೪ರ೫೬ **ಶಸ್ತ್ರಹತಶ್ರಾದ್ಧಂ** ತುಲಾಯಸಂ೨೬॥ **ಶರದ್ವಿಷುವಂ**	
	೨	24	೭	೩೦ ರ೪೦। ಉತ್ತ೫೧॥ ಶು೬। ಚ೧೧ ವಿ೧೦ ಅ೩೪ ಕನ್ಯಾಚ೬। ಹ೩ಬು೩೫ **ಶುಕ್ರೋದಯಃಪಶ್ಚಿಮ ● ಅಮಾವಾಸ್ಯಾ ಸರ್ವಪಿತೃದರ್ಶಃ** ವೈ.ಪ್ರ.೨೯ ನಿ.೪೩	
ಮ. ನ. ಉತ್ತರೆ ಕನ್ಯಾ (ನಿರ್ವಾಲ)				ಉತ್ತರ, ಸ್ವಾತಿ, ಚಿಗವಬು, ಆಳಗು, ಹಶು, ಪ್ರೂ೨ವಶ. ಚಳರಾ, ಆ೨ಕೆ. ಉ.ಘಂ.6-20 ಅ.ಘಂ. 6-24 ದಿ.ಮಾ.ಘ. ೩೦೫೦	

	ಕೆ		
ರ	ಅಮಾವಾಸ್ಯಾ ●		
			ಚ
	ಗು	ಕುಜ	ಬು ಶು

ಗ್ರಹಸ್ಥಿತಿ, ದಿನಾಂಕ ಕಾಲ

ಧನಿಷ್ಠಾ ನಕ್ಷತ್ರಾಂತ್ಯದಲ್ಲಿ ಸೂರ್ಯನು ಬಂದಾಗ ಉತ್ತರಾಯಣಾರಂಭವೆಂದೂ, ಮೈತ್ರ್ಯುಪನಿಷತ್ತಿನಲ್ಲಿ ಧನಿಷ್ಠಾರ್ಧದಲ್ಲಿ ಸೂರ್ಯನು ಬಂದಾಗ ಉತ್ತರಾಯಣವೆಂದೂ; ವೇದಾಂಗ

ರಾಷ್ಟ್ರೀಯ ಮಾಸ ಆಶ್ವಿನ	1995 ಸಪ್ಟಂಬರ ಕನ್ಯಾ	ಶಕಃ ೧೯೧೭ **ಯುವ ಸಂವತ್ಸರಃ ಆಶ್ವಿನ ಶುಕ್ಲಪಕ್ಷಃ ಶರದೃತುಃ ದಕ್ಷಿಣಾಯನಂ**	ಉದಯ ಘಂ. 6-20 ಅಸ್ತ ಘಂ. 6-23 ದಿನಮಾನ ಘ. ೩೦।೦೭

	ರಾದಿ	ತಾ.	ದಿನ	ತಿಥಿ, ವಾರ, ನಕ್ಷತ್ರ, ಯೋಗ, ಕರಣ, ವಿಷ, ಅಮೃತ
(ಶ್ರೀ ಶರದೃತುಃ)	೩	25	೮	೧ ಚಿ೩೭। ಸೋ೧೦॥ ಹ್ಟ೧॥ಉ೫೪॥ ಕಿಂ೮॥ ವಿ೧೨। ಅ೩೫॥ **ನವರಾತ್ರಾರಂಭಃ**
	೪	26	೯	೨ ಕು೩೩। ಚಿ೪೮। ಏಕ೦। ಬಾ೫॥ ವಿ೯॥ ಅ೩೨॥ ತುಲಾರ್ಚ॥ **ಚಂದ್ರದರ್ಶನಂ**
	೫	27	೧೦	೩ ಬು೨೮॥ ಸ್ವಾ೪೫। ವೈ೪೩॥ ತೈ೧ ವಿ೧।ವಿ೫೮॥ ಅ೨೪। **ಹಸ್ತೇರ್ಕಃ೨೦**। ವಿ೧ಕು೪೨ ಹ೪ಶು೧೫ ಜಮಾದಿಲಾವಲ್
	೬	28	೧೧	೪ ಗು೨೩॥ ವಿ೪೨ ವಿ೩೬॥ ಭ೨೩॥ ವಿ.ಶಿ.೨ವಿ೫೧। ಅ೨೧। ವೃಶ್ಚಿಕೆಚ೨೮ **ಶ್ರೀಲಲಿತಾ ಪಂಚಮೀ**
	೭	29	೧೨	೫ ಶು೧೮ ಅ೩೮। ಪ್ರೀ೨೯॥ ಬಾ೧೮ ವಿ೫೧॥ ಅ೧೩॥ ಹ೪ವಬು೩೩ ಚಿ೧ಶು೫೬ ಬುಧಾಸ್ತಪಶ್ಚಿಮೆ
	೮	30	೧೩	೬ ಶ೧೨॥ ಜ್ಯೇ೩೪॥ ಆ೨೨ ತೈ೧೨॥ ವಿ೫೩॥ ಅ೧೪ ಹ೨೮೪೩॥ ಧನುಷಿಚ೩೪॥ ಜ್ಯೆ೧ಗು೫೧
(ಶ್ರೀ ಆಶ್ವಿನ)	೯	1	೧೪	೭ ರ೭। ಮೂ೩೧ ಸೌ೧೪॥ ವ೭। ವಿ೫೩॥ ಅ೧೬ **ಶಾರದಾಪೂಜಾರಂಭ ಒಕ್ಟೋಬರ**
	೧೦	2	೧೫	೮ ಚ೧॥ ಉ೫೪॥ ಪ್ಪೂ೨೭॥ ಶೋ೭॥ ಬ೧॥ ವಿ೪೬। ಅ೧೬। ಮಕರೆಚ೪೧॥ ವಿ೨ಕು೩೨ ಹ೩ವಬು೫೨ ಚಿ೨ಶು೩೭ ○
	೧೧	3	೧೬	೧೦ ಕು೫೧॥ ಉ೨೪। ಅ॥ ಉ೫೩। ತೈ೨೪ ವಿ೩೩॥ ಅ೯ ಅ೫೬॥ **ವಿಜಯಾದಶಮೀ ವಿದ್ಯಾದಶಮೀ ಶಮೀಪೂಜಾ ಮಧ್ವಜ.** *
	೧೨	4	೧೭	೧೧ ಬು೪೭ ಶ್ರ೨೧। ಧೃ೪೭ ವರ್ಗ। ವಿ೩೦॥ ಅ.ಶಿ.ಅ೫೪ ಹ೩ರ೭ ಕುಂಭೆಚ೫೦ ಚಿ೩ರಾಲ್ಡ೧ಕಿ೩೮ **ಸರ್ವೈಕಾದಶೀ** *
	೧೩	5	೧೮	೧೨ ಗು೪೩। ಧ೯ ಶೂ೪೧। ಬ೫ ವಿ೩೬॥ ಅ೬೦ ಹ೨ವಬು೪೭ ತುಲಾಶುಕ್ರ೧೭ ಹರಿವಾಸರ೧ **ದ್ವಿದಲವ್ರತಾರಂಭಃ ಕಳಸಚಂಡಿಕಾಯಾಗ**
	೧೪	6	೧೯	೧೩ ಶು೪೦। ಶ್ರ೧೭॥ ಗಂ೩೬ ಕೌ೧೧॥ ವಿ೩೩। ಅ.ಶಿ.೩॥ ಅ೫೭ **ಪ್ರದೋಷಃ ವೃಷ್ಪ.೨೧ ನಿ.೩೬** [* **ಶಾರದಾವಿಸರ್ಜನಂ**
	೧೫	7	೨೦	೧೪ ಶ೩೮॥ ಪೂ೧೬॥ ವೃ೩೧॥ ಗ೯॥ ವಿ೪೧ ಅಶಿ೧ ಹ೪ರ೩೦॥ ಮೀನೆಚ೧॥ ವಿ೩ಕು೨೦ ಚಿ೪ಶು೪೮ **ಕೋಜಾಗರೀ ಲಕ್ಷ್ಮೀಪೂಜಾ** *
	೧೬	8	೨೧	೧೫ ರ೩೭ ಉ೧೭। ಧ್ರು೨೮। ಭ೭॥ ವಿ೪೮ ಅ೫। ○**ಪೂರ್ಣಿಮಾ ಆಗ್ರಯಣಂ** (ನವಾನ್ನ) **ವಾಲ್ಮೀಕಿಜಯಂತೀ ತಿರುಪತಿ ಬ್ರಹ್ಮೋತ್ಸವ**
				[* **ಬುದ್ಧ ಜಯಂತಿ** [* **ಸೌಭಾಗ್ಯವ್ರತಂ (ಜೈನ್)** [○**ಮನ್ವಾದಿಃ ನವರಾತ್ರ ಸಮಾಪ್ತಿಃ ಆಯುಧಪೂಜಾ ಮಹಾನವಮೀ**
ಮ. ಸ. ಹಸ್ತ ಕನ್ಯಾ (ನಿರಯಣ)				ಹ೪ರ, ವಿ೩ಕು, ಹ೨ವಬು, ಜ್ಯೆಗು, ಚಿ೪ಶು, ಪ್ಪೂ೨ವಶ, ಚಿ೩ರಾ, ಲ್ಡ೧ಕೆ. ಉಘಂ.6-20 ಅ.ಘಂ. 6-14 ದಿ.ಮಾ.ಘ. ೨೯।೪೫

ಚ	ಕೆ		
ಶ	ಪೂರ್ಣಿಮಾ ○		
	ಗು	ಶುಶು ರಾ	ರಬು

ಗ್ರಹಸ್ಪಷ್ಟ, ದಿನಾರಿ ಶರ
ರ ೫೬೦೨೯ ೩೭೦' –
ಚ ೧೧೧೨೫೩ ೩೬೩ ಉ೧॥
ಕು ೬೬೭೦೮ ೩೪೨ ದ॥
ಬು ೫೧೪೪೯ ವ೪೪ ದ॥
ಗು ೭೧೭೨೪೮ ೩೧೦ ಉ॥
ಶು ೬೧೩೩೩ ೩೭೫ ಉ॥
ಶ ೧೦೬೫೫೦ ವ೪ ದ॥
ರಾ ೬೧೩೩೦೯ ವ೩। –
ಅಯನಾಂಶ ೨೩°೪೮' ೧೦೮"

ದಿನ ಆಕಾಶವಾಣಿ, ದೂರದರ್ಶನ ಹಾಗೂ ಹಲವಾರು ಪ್ರಗತಿಪರ ದೈನಿಕಗಳು ಈ ಮಾಹಿತಿಗಳನ್ನು ಬಿತ್ತರಿಸುತ್ತಿವೆ.

ತಾ : ತಾರೀಕು. ರೂಢಿಯಲ್ಲಿರುವ ಅಂತಾರಾಷ್ಟ್ರೀಯ ತಾರೀಕು ಪಟ್ಟಿ (ದಿನ ಸೂಚಿ) ಪ್ರಕಾರ ದಿನಾಂಕ.

ದಿನ : ಮೇಷದಿಂದ ಮೀನದ ವರೆಗಿನ 12 ಸೌರಮಾಸಗಳ ಪೈಕಿ ಈಗ ನಡೆಯುತ್ತಿರುವ ಮಾಸದಲ್ಲಿ ಎಷ್ಟನೆಯ ದಿನ ಎನ್ನುವುದನ್ನು ಸೂಚಿಸುವ ಸಂಖ್ಯೆ (ಪುಟದ ಅಗ್ರದಲ್ಲಿರುವ ಪಟ್ಟಿಯಲ್ಲಿ ಈ ರಾಶಿನಾಮ ಅಂಕಿತವಾಗಿದೆ.)

ತಿಥಿ : ಚೈತ್ರದಿಂದ ಫಾಲ್ಗುನದವರೆಗಿನ 12 ಚಾಂದ್ರಮಾಸಗಳ ಪೈಕಿ ಈಗ ನಡೆಯುತ್ತಿರುವ ಮಾಸದ ಶುಕ್ಲ ಅಥವಾ ಕೃಷ್ಣ ಪಕ್ಷದಲ್ಲಿ ಎಷ್ಟನೆಯ ದಿನ ಇಂದು ಎನ್ನುವುದನ್ನು ಸೂಚಿಸುವ ಸಂಖ್ಯೆ. ಪುಟದ ಅಗ್ರದಲ್ಲಿರುವ ಪಟ್ಟಿಯಲ್ಲಿ ಈ ಮಾಸನಾಮ ಅಂಕಿತವಾಗಿದೆ. ಶುಕ್ಲ ಪಕ್ಷವನ್ನು 'ಶುದ್ಧ' ಎಂದೂ ಕೃಷ್ಣಪಕ್ಷ ವನ್ನು 'ಬಹುಳ' ಎಂದೂ ಹೇಳುವುದುಂಟು. ತಿಥಿ ಸಂಖ್ಯೆಗಳಿಗೆ ವಿಶೇಷ ಹೆಸರುಗಳಿವೆ. ೧ ಪಾಡ್ಯ, ೨ ಬಿದಿಗೆ, ೩ ತದಿಗೆ, ೪ ಚೌತಿ, ೫ ಪಂಚಮಿ, ೬ ಷಷ್ಠಿ, ೭ ಸಪ್ತಮಿ, ೮ ಅಷ್ಟಮಿ, ೯ ನವಮಿ, ೧೦ ದಶಮಿ, ೧೧ ಏಕಾದಶಿ, ೧೨ ದ್ವಾದಶಿ, ೧೩ ತ್ರಯೋದಶಿ, ೧೪ ಚತುರ್ದಶಿ, ಶುಕ್ಲ ಪಕ್ಷಾಂತ್ಯದಲ್ಲಿ ಹುಣ್ಣಿಮೆ, ಕೃಷ್ಣ ಪಕ್ಷಾಂತ್ಯದಲ್ಲಿ ಅಮಾವಾಸ್ಯೆ. ಆದ್ದರಿಂದ "ಯುವ ಸಂವತ್ಸರದ ಆಶ್ವಿನ ಶುಕ್ಲ ಪಕ್ಷ ಸಪ್ತಮಿ" ಎಂದರೆ ದಿನಾಂಕ 1-10-1995 ಎಂದು ಪಂಚಾಂಗದಿಂದ ನೇರವಾಗಿ ಓದಬಹುದು. ಕಾಲ ಒಂದೇ, ನಾಮ ಹಲವು ! "ಪ್ರಭವ ಸಂವತ್ಸರದ ಆಶ್ವಿನ ಶುಕ್ಲ ಪಕ್ಷ ಸಪ್ತಮೀ" ಎಂದಾಯಿತು ಗೊತ್ತೇ ? ೧೯೮೭ ಸೆಪ್ಟೆಂಬರ್ ೨೯-೩೦ ನಡುವೆ ಸಂದುಹೋಯಿತು.

ವಾರ : ಭಾನುವಾರದಿಂದ ಶನಿವಾರದ ತನಕ ವ್ಯಾಪಿಸುವ ಸಪ್ತಾಹದಲ್ಲಿ ಇಂದಿನ ದಿವಸನಾಮ.

ನಕ್ಷತ್ರ : ನಾಕ್ಷತ್ರಿಕ ಮಾಸದಲ್ಲಿ ಚಂದ್ರನ ನೆಲೆ ಅಶ್ವಿನಿಯಿಂದ ರೇವತಿವರೆಗಿನ 27 ನಕ್ಷತ್ರಗಳ ಪೈಕಿ ಯಾವುದರಲ್ಲಿದೆ ಎಂಬ ಮಾಹಿತಿ. ಇದಕ್ಕೆ ನಿತ್ಯ ನಕ್ಷತ್ರವೆಂದು ಹೆಸರು. ಯಾವುದೇ ದಿನ ಪಂಚಾಂಗದಲ್ಲಿ ನಿತ್ಯ ನಕ್ಷತ್ರ ಓದಿ ಆಕಾಶ ನೋಡಿದರೆ ಅದರ ವಲಯದಲ್ಲಿ ಚಂದ್ರನನ್ನು ಕಾಣಬಹುದು; ಆಕಾಶದಲ್ಲಿ ಚಂದ್ರನ ವಲಯದಲ್ಲಿರುವ ನಿತ್ಯ ನಕ್ಷತ್ರವನ್ನು ಗುರುತಿಸಿ ಪಂಚಾಂಗ ನೋಡಿದರೆ ಅಲ್ಲಿ ಅದು ಉಲ್ಲೇಖಿತವಾಗಿರುವುದು. ತಾಳೆ ಆಗದಿದ್ದರೆ ಪಂಚಾಂಗ ದೋಷಯುಕ್ತವಾಗಿದೆ ಎಂದು ತೀರ್ಮಾನಿಸಬೇಕು, ಅಂದರೆ ಪಂಚಾಂಗಗಣನೆ ಸಮರ್ಪಕವಾಗಿಲ್ಲ ಎಂದರ್ಥ.

ಯೋಗ, ಕರಣ : ಸೂರ್ಯ, ಚಂದ್ರರ ವಾಸ್ತವ ನೆಲೆಗಳನ್ನು ಆಧರಿಸಿ, ಕೆಲವು ಸಿದ್ಧ ಸೂತ್ರಗಳ ಅನುಸಾರ, ನಿಗಮಿಸುವ ವಿಶೇಷ ಗಣಿತ ಮಾಹಿತಿಗಳು. ಇವುಗಳಿಗೆ ದೈನಂದಿನ ಜೀವನದಲ್ಲಾಗಲಿ ಸಾಕ್ಷಾತ್ ಗಗನದಲ್ಲೇ ಆಗಲಿ, ಏನೂ ಮಹತ್ತ್ವವಿಲ್ಲ.

ವಿಷ, ಅಮೃತ : ಮೂಢ ನಂಬಿಕೆಗಳು. ಪರಂಪರೆಯ ಬಳುವಳಿಗಳಾದ ಪಳೆಯುಳಿಕೆಗಳು. ಕಾಲವನ್ನು 'ವಿಷ' ಮತ್ತು 'ಅಮೃತ' ಎಂದು ವಿಂಗಡಿಸುವವರು ದುರ್ಬಲಮನಸ್ಕ ಪಲಾಯನ ವಾದಿಗಳು.

ಹೇಗೂ ಇರಲಿ. "ತಿಥಿ, ವಾರ ನಕ್ಷತ್ರ, ಯೋಗ, ಕರಣ" ಎಂಬ ಐದು (ಪಂಚ) ಮಾಹಿತಿ (ಅಂಗ)ಗಳನ್ನು ಒದಗಿಸುವ ಪುಸ್ತಕವೇ ಪಂಚಾಂಗ (= ಪಂಚ + ಅಂಗ). ಖಗೋಳೀಯ ಮಾಹಿತಿಗಳು, ಧಾರ್ಮಿಕ ಜೀವನದ ಪ್ರೇರಣೆಗಳು, ಪರಂಪರಾಗತ ವಿಧಿ ನಿಷೇಧಗಳು, ಹಲವಾರು (ಅಸಂಗತ) ನಂಬಿಕೆಗಳು ಮತ್ತು ಇವುಗಳಿಗೆ ವಿವರಣೆಗಳು, ದಶಾಫಲ ಶಕುನ ಫಲ ಮುಂತಾದ ಫಲ ಸೂಚನೆಗಳು, ವಿವಿಧ ಕಾರ್ಯಗಳಿಗೆ ಶುಭಾಶುಭ ಮುಹೂರ್ತಗಳು ಮುಂತಾದ ಸಂಗತಿ ವಿಸಂಗತಿಗಳ ಉಗ್ರಾಣವೇ ಪಂಚಾಂಗ, ಸರ್ವೋಪಯೋಗೀ ಕೈಪಿಡಿ. ಖಗೋಳವಿಜ್ಞಾನಿಗಳಿಗೆ ಆಕಾಶದರ್ಶಿ, ವಿಚಾರಪ್ರಿಯರಿಗೆ ಕುತೂಹಲದ ಗಣಿ, ಜನಸಾಮಾನ್ಯರಿಗೆ ಧಾರ್ಮಿಕ ಮಾಹಿತಿಗಳ ಸಂಗ್ರಹ ಮತ್ತು ಕುರುಡು ನಂಬಿಕೆಗಳ ಕಲಸು.

ಪಂಚಾಂಗದ ಐದು ಅಂಗಗಳ ಪೈಕಿ ಖಗೋಳದಲ್ಲಿ ಅರ್ಥವಿರುವುದು ದಿನ, ತಿಥಿ ಮತ್ತು ನಕ್ಷತ್ರಗಳಿಗೆ ಮಾತ್ರ. ಉದಾಹರಣೆಗೆ ಪುಟ 38ರಲ್ಲಿರುವ ಪಂಚಾಂಗದ ಹಾಳೆಯನ್ನು ನೋಡಿ (1995 ಸೆಪ್ಟೆಂಬರ್ ಕನ್ಯಾ ಮಾಸ) : "ದಿನ ೧೭, ತಿಥಿ ೧೧, ನಕ್ಷತ್ರ ಶ್ರವಣಾ" ಎಂಬ ನಮೂದು ಇದೆ.

ದಿನ ೧೭ ಎಂದರೆ ಸೂರ್ಯ ಈಗ ಕನ್ಯಾರಾಶಿಯಲ್ಲಿ ೧೭ ÷ ೩೦ ರಷ್ಟು ದೂರ ಸಾಗಿದೆ ಎಂದರ್ಥ. ತಿಥಿ ೧೧ ಎಂದರೆ ಶುಕ್ಲ ಪಕ್ಷದ ಏಕಾದಶೀ ಎಂದರ್ಥ. ನಕ್ಷತ್ರ ಶ್ರವಣಾ ಎಂದರೆ ಚಂದ್ರ ಈಗ ಈ ನಕ್ಷತ್ರದ ವಲಯದಲ್ಲಿದೆ ಎಂದರ್ಥ. ಶ್ರವಣಾ ನಕ್ಷತ್ರದ ಬಳಿ ಅರ್ಧಾಧಿಕ ಚಂದ್ರನನ್ನು ನೋಡಬಹುದು.

'ದಿನ' ಸೂರ್ಯ ಸಂಬಂಧಿ ಆದದ್ದು. ನೇರವಾಗಿ ಆಗಸದಲ್ಲಿ ಗುರುತಿಸುವುದು ಅಸಾಧ್ಯ, ಸೂರ್ಯನ ಉಜ್ಜ್ವಲತೆಯ ಕಾರಣವಾಗಿ. 'ತಿಥಿ' ಮತ್ತು 'ನಕ್ಷತ್ರ' ಚಂದ್ರಸಂಬಂಧಿ ಆದವು. ಆದ್ದರಿಂದ ಬಾನಿನಲ್ಲಿ ಬೊಟ್ಟಿಟ್ಟು ತೋರಿಸುವುದು ಸುಲಭ.

ಪಂಚಾಂಗದ ಶುಕ್ಲಪಕ್ಷ ಪುಟದಲ್ಲಿ 'ತಿಥಿ ೩ ನಕ್ಷತ್ರ ಉತ್ತರಾಷಾಢಾ' ಎಂದಿದ್ದರೆ ಅರ್ಥ : ಶುಕ್ಲಪಕ್ಷದ ತದಿಗೆ, ಅಮಾವಾಸ್ಯೆ ಕಳೆದು 3 ದಿವಸಗಳು ಸಂದಿವೆ, ಚಂದ್ರನ ನೆಲೆ ಉತ್ತರಾಷಾಢಾ ನಕ್ಷತ್ರ, ಬಾಲಚಂದ್ರಬಿಂಬ ಸೂರ್ಯಾಸ್ತಮಾನವಾಗುತ್ತಿರುವಂತೆ ಪಡುಬಾನಿನಲ್ಲಿ ಕಾಣುವುದು. ಕೃಷ್ಣಪಕ್ಷ ಪುಟದಲ್ಲಿ 'ತಿಥಿ ೯ ನಕ್ಷತ್ರ ರೇವತಿ' ಎಂದಿದ್ದರೆ ಅರ್ಥ : ಕೃಷ್ಣಪಕ್ಷದ ನವಮಿ, ಇನ್ನು ೬ ದಿವಸಗಳಲ್ಲಿ ಅಮಾವಾಸ್ಯೆ ಸಂಭವಿಸಲಿದೆ. ಆದ್ದರಿಂದ ಅರ್ಧನ್ಯೂನಚಂದ್ರ ರಾತ್ರಿ ತಡವಾಗಿ ಮೂಡುತ್ತದೆ. ಇದರ ಪೂರ್ವಭಾಗ ಬೆಳಗುತ್ತಿರುವುದು - ಸೂರ್ಯ ಇದನ್ನು ಪೂರ್ವ-ಪಶ್ಚಿಮ ದಿಶೆಯಲ್ಲಿ ಮುಂದೂಡಿಕೊಂಡು ಹೋಗುತ್ತಿದೆಯೋ ಎಂಬಂತೆ.

ಅಂದ ಮೇಲೆ ಪಂಚಾಂಗದಲ್ಲಾಗಲಿ ಇದನ್ನು ಆಧರಿಸಿದ ಆಕಾಶ ವಿದ್ಯಮಾನಗಳಲ್ಲಾಗಲಿ ದೈವಿಕವಾದದ್ದು, ಪಾರಲೌಕಿಕವಾದದ್ದು ಅಥವಾ ಮನುಷ್ಯಾತೀತವಾದದ್ದು ಏನೂ ಇಲ್ಲ.

ರೇಲ್ವೇ ವೇಳಾಪಟ್ಟಿಗೂ ರೈಲು ಸಂಚಾರಕ್ಕೂ ಇರುವ ನಡುವಿನ ಸಂಬಂಧದಂತೆ ಪಂಚಾಂಗಕ್ಕೂ ಆಕಾಶ ಚಲನವಲನಗಳಿಗೂ ಸಂಬಂಧವಿದೆ.

ಇಲ್ಲಿ ಒಂದು ಸಂಗತಿ ಸ್ಪಷ್ಟಪಡಿಸಬೇಕು. ಇಂದು ಪ್ರಚಾರದಲ್ಲಿರುವ ಪಂಚಾಂಗಗಳನ್ನು ವ್ಯಾಪಕವಾಗಿ ಮೂರು ಗುಂಪುಗಳಲ್ಲಿ ಅಳವಡಿಸಬಹುದು. ಸೂರ್ಯ ಸಿದ್ಧಾಂತಾನುಸಾರ ರಚಿಸಿದ 'ಸಿದ್ಧಾಂತ ಪಂಚಾಂಗ,' ಆಧುನಿಕ ಗಣಿತ ಮತ್ತು ವೀಕ್ಷಣಾನುಸಾರ ರಚಿಸಿದ 'ದೃಗ್ಗಣಿತ ಪಂಚಾಂಗ' ಮತ್ತು ಉಭಯ ಗಣನೆಗಳನ್ನೂ ಆಧರಿಸಿ ರಚಿಸಿದ 'ಸಿದ್ಧಾಂತ ದೃಗ್ಗಣಿತ ಪಂಚಾಂಗ.' ಯಾರು ಹಿತವರು ನಿಮಗೆ ಈ ಮೂವರೊಳಗೆ ? ಇರುವುದೊಂದೇ ಬಾನು, ಅದನ್ನು ನೋಡಿ ಅರಿಯುವುದೊಂದೇ ನಾನು, ಅಂದ ಮೇಲೆ ಮೂರು ವ್ಯಾಖ್ಯಾನಗಳ ರಹಸ್ಯ ಏನು ?

ಈಗ ಕೆಲವು ಶತಮಾನಗಳ ಹಿಂದಿನ ಆಕಾಶಾನುಭವಗಳಿಗೆ ಅಂದಿನ ಖಗೋಳ ಪಂಡಿತರು ಬರೆದ ವ್ಯಾಖ್ಯಾನ 'ಸೂರ್ಯಸಿದ್ಧಾಂತ.' ಅಂದು ಮೇಷ ಸಂಕ್ರಮಣವೂ ವಸಂತ ವಿಷುವವೂ ಒಂದೇ ಆಗಿದ್ದುದರಿಂದ (ಪುಟ 20) ಅಂದೇ (ಏಪ್ರಿಲ್ 14) ಯುಗಾದಿ ಸಂಭವಿಸುತ್ತಿತ್ತು. ಅಂದಿಗೆ ಸೂರ್ಯಸಿದ್ಧಾಂತ ಸರಿ. ಇಂದಿಗೆ ? ಅದಕ್ಕೆ ಐತಿಹಾಸಿಕ ಮಹತ್ತ್ವ ಮಾತ್ರ.

ಇಂದಿನ ಆಕಾಶ ಅಥವಾ ಬಾನು ಅಂದಿನದರಂತೆ ಇಲ್ಲ. ಬದಲಾಗಿದೆ. ಆದ್ದರಿಂದ ಇದರಲ್ಲಿಯ ವಿದ್ಯಮಾನಗಳನ್ನು ಗಣಿಸಿ ವಿವರಿಸಲು ನೂತನ ವೀಕ್ಷಣೆ ಮತ್ತು ತದನುಗುಣ ಗಣಿತವನ್ನು ಪ್ರವರ್ತಿಸಬೇಕು ಎಂದರೆ ಯಾರೂ ಒಪ್ಪುವ ಮಾತು. ಹೀಗೆ ಪ್ರಚಾರಕ್ಕೆ ಬಂದಿರುವ ಆಧುನಿಕ ಪಂಚಾಂಗವೇ 'ದೃಗ್ಗಣಿತ ಪಂಚಾಂಗ.' ರಾಷ್ಟ್ರೀಯ ಪಂಚಾಂಗ ಈ ಗುಂಪಿಗೆ ಸೇರಿದೆ. ವರ್ತಮಾನ ವಾಸ್ತವತೆಯ ಯಥಾ ಪ್ರತಿಬಿಂಬವೇ ದೃಗ್ಗಣಿತ ಪಂಚಾಂಗ. ಇದೊಂದೇ ಸಾಧುವಾದದ್ದು, ಅಂಗೀಕಾರಾರ್ಹವಾದದ್ದು. (ನಿದರ್ಶನ :'ವೈಜಯಂತೀ ಪಂಚಾಂಗ' ಸಂಪಾದಕರು : ಯರ್ಮುಂಜ ಶಂಕರ ಜೋಯಿಸರ ಮಗ ಭೀಮಜೋಯಿಸ, ಅಂಗರಜೆ, ಅಂಚೆ ಕೆದಿಲ ೫೭೪೨೨೦, ದಕ್ಷಿಣ ಕನ್ನಡ ಜಿಲ್ಲೆ.)

ಮೂರನೆಯ ಸಂಕರ ಶಿಶು 'ಸಿದ್ಧಾಂತ-ದೃಗ್ಗಣಿತ ಪಂಚಾಂಗ' ಪೂರ್ಣವಾಗಿ ಆತ್ಮವಂಚನೆ, ಜನದ್ರೋಹ, ಎಂದೇ ತಿರಸ್ಕಾರಾರ್ಹವಾದದ್ದು. ಸಿದ್ಧಾಂತ ಪಂಚಾಂಗಕರ್ತರನ್ನು ಮುಗ್ಧ ಅಜ್ಞಾನಿಗಳೆಂದು ಕಡೆಗಣಿಸಬಹುದು. ಆದರೆ ಸಿದ್ಧಾಂತ-ದೃಗ್ಗಣಿತ ಪಂಚಾಂಗಕರ್ತರು ಮುಗ್ಧ ಅಜ್ಞಾನಿಗಳಲ್ಲ, ಕಪಟ ಜ್ಞಾನಿಗಳು. ಇವರು ಅಂಧ ಪರಂಪರೆಗೆ ನಮಿಸುತ್ತ ಸಿದ್ಧಾಂತವನ್ನೂ ವರ್ತಮಾನ ವಾಸ್ತವತೆಗೆ ಅನಿವಾರ್ಯವಾಗಿ ಮಣಿಯುತ್ತ ದೃಗ್ಗಣಿತವನ್ನೂ ಬೆರೆಸುತ್ತಿದ್ದಾರೆ. ಎಲ್ಲಿ ಜನ ಸ್ವತಃ ಆಕಾಶ ನೋಡಿ ಪಂಚಾಂಗದ ಸತ್ಯಾಸತ್ಯತೆ ನಿರ್ಣಯಿಸಬಲ್ಲರೋ (ಗ್ರಹಣ, ಹುಣ್ಣಿಮೆ, ಅಮಾವಾಸ್ಯೆ) ಅಲ್ಲಿ ದೃಗ್ಗಣಿತವನ್ನೂ ಎಲ್ಲಿ ಅಂಥ ಆವಶ್ಯಕತೆ ಇಲ್ಲದೇ ಪರಂಪರೆಗೆ ಶರಣಾಗಿ ಹಬ್ಬ ಹರಿದಿನಗಳನ್ನು ಆಚರಿಸುವರೋ (ಜಾತಕ ಲೇಖನ, ಫಲಜ್ಯೋತಿಷ್ಯ, ಯುಗಾದಿ ಹಬ್ಬ) ಅಲ್ಲಿ ಸಿದ್ಧಾಂತ ಗಣಿತವನ್ನೂ ಪ್ರಯೋಗಿಸುತ್ತಾರೆ. ಇಂಥ ಸಾಮಾಜಿಕ-ಧಾರ್ಮಿಕ ವಂಚನೆಯಲ್ಲಿ ಸ್ವಾರ್ಥವಿದೆ, ಧನವಿದೆ, ಅಧಿಕಾರವೂ ಇದೆ. ಮುಗ್ಧ ಮಂದಿಯ ಅಂಧವಿನೀತತೆ ಇವರ ಬಂಡವಾಳ. ಸಂಕರ ಪಂಚಾಂಗಕರ್ತರು ಸಮಾಜಕ್ಕೆ ಆತಂಕಕಾರಿಗಳು.

ಹಾಗಾದರೆ, ಪಂಚಾಂಗ ಎಷ್ಟು ನಿಜ ?

ದೃಕ್ಸಿದ್ಧಾಂತಾನುಸಾರ ರಚಿತವಾದ ಪಂಚಾಂಗ ಮಾತ್ರ ಸಾಧು : ಉದಾಹರಣೆಗೆ ರಾಷ್ಟ್ರೀಯ ಪಂಚಾಗ ಮತ್ತು ವೈಜಯಂತೀ ಪಂಚಾಂಗ. ಇಲ್ಲಾದರೂ ಖಗೋಳೀಯ ಮಾಹಿತಿಗಳನ್ನು ವ್ಯಾವಹಾರಿಕ ಸೌಕರ್ಯದ ಸಲುವಾಗಿ ಪಡೆದರೆ ಸಾಕು - ರೇಲ್ವೇ ವೇಳಾಪಟ್ಟಿಯಿಂದ ಬಂಡಿಗಳ ಚಲನವಲನ ಮಾಹಿತಿಗಳನ್ನು ಪಡೆಯುವಂತೆ. ನಮ್ಮ ದೈನಂದಿನ ಕಾರ್ಯಕಲಾಪಗಳನ್ನು - ಪ್ರಯಾಣ, ಮಕ್ಕಳ ಮದುವೆ, ಗೃಹಪ್ರವೇಶ, ಮಗುವಿಗೆ ವಿದ್ಯಾರಂಭ ಇತ್ಯಾದಿ - ನಿರ್ವಹಿಸಲು ಪಂಚಾಂಗವನ್ನು ನೇರವಾಗಿ ಅವಲಂಬಿಸುವುದಾಗಲಿ ಇತರ 'ತಜ್ಞರ' ಮೂಲಕ ಓದಿಸಿ ತಿಳಿಯುವುದಾಗಲಿ ಮೂಢ ಆಚರಣೆ. ಇಲ್ಲಿಯ ಸಮಸ್ಯೆಗೆ ಇಲ್ಲಿಯೇ (ನೆಲ) ಪರಿಹಾರ ಅರಸಬೇಕು, ಅಲ್ಲಿ (ಬಾನು) ಅಲ್ಲ!

ಕೊನೆಯದಾಗಿ, ರಾಮಣ್ಣ-ಸೀತಕ್ಕ ದಂಪತಿಗಳ ನವಜಾತ ಶಿಶುವಿನ ಭವಿಷ್ಯ ಕುರಿತು ಆ ಜೋಯಿಸ ನೀಡಿದ ವಿವರಣೆ, ಅಂತೆಯೇ ಆಧುನಿಕ ಗಣಕದ ನೆರವಿನಿಂದ ತಯಾರಿಸಿದ

ಜಾತಕ ಆಧರಿಸಿ ನುಡಿಯುವ ಭವಿಷ್ಯವಾಣಿ ಎಲ್ಲವೂ ಹಸಿ ಸುಳ್ಳು, ಶುದ್ಧ ವಂಚನೆ, ಸಮಾಜದ್ರೋಹ. "ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು." "ಗ್ರಹಗತಿಯ ತಿದ್ದುವನೆ ಜೋಯಿಸನ ಜಾತಕದಿ ! " ಎಂದಿರುವರು ಡಿ.ವಿ.ಜಿ. (ಮಂಕುತಿಮ್ಮನ ಕಗ್ಗ)

✡ ✡ ✡ ✡ ✡